ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಸೇಂಟ್ ಲೂಯಿ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿಯಲ್ಲಿ ಮೊದಲ ಬಾರಿ ಪ್ರಶಸ್ತಿ ಗೆದ್ದುಕೊಂಡರು.



08 ಆಗಸ್ಟ್, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -148 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಕಾವೇರಿ: ಸಂಘರ್ಷದಿಂದ ಪರಿಹಾರವಿಲ್ಲ, ವೈಜ್ಞಾನಿಕ ಜಲಾಡಳಿತದಿಂದ ನ್ಯಾಯ » 2



ದೆಹಲಿಯಲ್ಲಿ ಭಾರಿ ಮಳೆ: ರಸ್ತೆಗಳು ಜಲಾವೃತ, ಸಂಚಾರ ಅಸ್ತವ್ಯಸ್ತ



ಸ್ವಾವಲಂಬಿ ಬದುಕಿಗೆ ಆರ್ಥಿಕ ಸದೃಢತೆ ಮುಖ್ಯ » 4

# ಸಭಾಪತಿ ಬಸವರಾಜ ಹೊರಟ್ಟಿ ರಾಜೀನಾಮೆ

## ಆ.14ರ ನಿರ್ಧಾರ ಬದಲು | ಮನವೊಲಿಸುವಲ್ಲಿ ಯಶಸ್ವಿಯಾದ ಸಿ.ಎಂ.

• ಪ್ರಜೋದಯ ವರದಿ

**ಬೆಂಗಳೂರು:** ತೀವ್ರ ಅಸಮಾಧಾನದ ನಡುವೆಯೂ ಆ.14ರಂದು ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಹೇಳಿದ್ದ ಬಸವರಾಜ ಹೊರಟ್ಟಿ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗಿನ ಮಾತುಕತೆ ಬಳಿಕ ಶುಕ್ರವಾರವೇ ರಾಜೀನಾಮೆ ಸಲ್ಲಿಸಿದ್ದಾರೆ.

ಈ ವಿಚಾರ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಅಸಮಾಧಾನಿತ ಸಚಿವಾಕಾಂಕ್ಷಿಗಳ ಸಮಾಧಾನಪಡಿಸುವಲ್ಲಿ ಕಾಂಗ್ರೆಸ್ ಹೈಕಮಾಂಡ್ ಕಸರತ್ತು ನಡೆಸುತ್ತಿದ್ದರೆ ಮತ್ತೊಂದೆಡೆ ಬಸವರಾಜ ಹೊರಟ್ಟಿ ಅವರ ರಾಜೀನಾಮೆಗೆ ಕಾಂಗ್ರೆಸ್ ಪಟ್ಟು ಹಿಡಿದಿದ್ದು ಪ್ರತಿಪಕ್ಷಗಳ ಆಕ್ರೋಶಕ್ಕೆ ಕಾರಣವಾಗಿದೆ. ಕಳೆದ ಒಂದು ವಾರದಿಂದ ನಡೆದಿದ್ದ ಈ ಪ್ರಹಸನ ಅಂತ್ಯಗೊಂಡಂತಾಗಿದ್ದು, ಸಾಂವಿಧಾನಿಕ ಬಿಕ್ಕಟ್ಟು ಎದುರಾಗದಂತೆ ಮತ್ತು ಯಾವುದೇ ಸಮಸ್ಯೆ ಎದುರಾಗದಂತೆ ಹೊರಟ್ಟಿಯವರು ಶಾಂತಚಿತ್ತದಿಂದಲೇ ರಾಜೀನಾಮೆ ನೀಡಿದ್ದಾರೆಂದು ತಿಳಿದುಬಂದಿದೆ.



> ಬಸವರಾಜ ಹೊರಟ್ಟಿ ಅವರು ವಿಧಾನ ಪರಿಷತ್ ಸಭಾಪತಿ ಸ್ಥಾನವನ್ನು ಅತ್ಯಂತ ಘನತೆ ಯಿಂದ ನಿಬಾಯಿಸಿಕೊಂಡು ಬಂದಿದ್ದಾರೆ. ಆ ಹುದ್ದೆಗೆ ಅವರು ನೀಡಿದಷ್ಟು ಗೌರವವನ್ನು ಬೇರೆ ಯಾರೂ ನೀಡಿಲ್ಲ. ಹಾಗಾಗಿ, ನಾವು ಸಹ ಅವರಿಗೆ ಅಷ್ಟೇ ಆದರದಿಂದ ಬೀಳ್ಕೊಡುಗೆ ನೀಡಲಿದ್ದೇವೆ. ಅವರನ್ನು ನಾವು ಸಂಪೂರ್ಣ ಗೌರವಿಸುತ್ತೇವೆ.
>
> **-ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ**

ಆ.14ರಂದು ರಾಜೀನಾಮೆ ಕೊಡಬೇಕಿತ್ತು. ಆದರೆ ಇವತ್ತೇ ಕೊಟ್ಟಿದ್ದೇನೆ. ಈ ಬಗ್ಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗೂ ಮಾತನಾಡಿದ್ದೇನೆ. ಹೀಗಾದಾಗ ಸಹಜವಾಗಿ ಬೇಸರ ಆಗುತ್ತದೆಂದು ಹೊರಟ್ಟಿ ಅವರು ಬೇಸರ ಹೊರಹಾಕಿದ್ದಾರೆ.

ರಾಜೀನಾಮೆ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ಹೊರಟ್ಟಿ ಅವರಿಗೆ ರಾಜಕೀಯದ ವಾಸ್ತವಾಂಶದ ಅರಿವಿದೆ. ಹಾಗಾಗಿ ಗೌರವದಿಂದ ರಾಜೀನಾಮೆ ನೀಡಿದ್ದಾರೆ. ಹೊಸಬರು ಆಯ್ಕೆ ಆಗುವವರೆಗೆ ಸಭಾಪತಿಯಾಗಿ ಮುಂದುವರಿಯುವಂತೆ ಮನವಿ ಮಾಡಿದ್ದೇನೆ. ಅವರು ನೀಡಿದ ರಾಜೀನಾಮೆ ಅಂಗೀಕಾರವಾಗಿದೆ. ಈ ಸಂಬಂಧ ರಾಜ್ಯಪಾಲರಿಗೆ ಪತ್ರ ಬರೆಯ ಲಾಗಿದೆ. ಆ.14ರಂದು ಉಪಸಭಾಪತಿ ಚುನಾವಣೆ ನಡೆಯಲಿದ್ದು ಅಂದು ಸಂಜೆಯೇ ಸಭಾಪತಿ ಆಯ್ಕೆ ಪ್ರಕ್ರಿಯೆ ಮುಗಿಯಲಿದೆ ಎಂದರು.

**ಹೊರಟ್ಟಿ ವಾದ ಏನು**

ರಾಜೀನಾಮೆ ಬಳಿಕ ಮಾತನಾಡಿದ ಬಸವರಾಜ ಹೊರಟ್ಟಿ ಅವರು, ಸಭಾ ಪತಿ ಆಗಿ ಏನು ಕೆಲಸ ಮಾಡಬೇಕೋ ಅದನ್ನು ಮಾಡಿದ್ದೇನೆ. ಪರಿಷತ್ ಸದಸ್ಯನಾಗಿ 19 ಮುಖ್ಯಮಂತ್ರಿಗಳ ಆಡಳಿತ ನೋಡಿದ್ದೇನೆ. ಸಭಾಪತಿ ಸ್ಥಾನವನ್ನು ಉತ್ತಮ ರೀತಿಯಲ್ಲಿ ನಿಬಾಯಿಸಿದ್ದೇನೆ. ಎಲ್ಲರೂ ನನ್ನ ಬಗ್ಗೆ ಗೌರವ ತೋರಿಸಿದ್ದಾರೆ. ಎಲ್ಲರಿಗೂ ಅವಕಾಶ ನೀಡಿದ್ದೇನೆ. ಸದನವನ್ನು ಉತ್ತಮವಾಗಿ ನಡೆಸಿದ್ದೇನೆಂಬ ಖುಷಿ ಇದೆಯೆಂದರು.

ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ಮಾತನಾಡಿ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಸ್ಥಾನಕ್ಕೆ ಬಸವರಾಜ್ ಹೊರಟ್ಟಿ ಅವರು ರಾಜೀನಾಮೆ ನೀಡಿರುವ ನಿರ್ಧಾರ ವನ್ನು ಗೌರವಿಸುತ್ತೇನೆ. ಸುದೀರ್ಘ ಸಾರ್ವಜನಿಕ ಹಾಗು ಸಂಸದೀಯ ಜೀವನದಲ್ಲಿ ವಿಧಾನ ಪರಿಷತ್ತಿನ ಘನತೆ, ಗೌರವ ಮತ್ತು ಸಂಸದೀಯ ಪರಂಪರೆಯನ್ನು ಎತ್ತಿಹಿಡಿದ ಹಿರಿಯ ನಾಯಕರು ಹೊರಟ್ಟಿ. ಸಭಾಪತಿಯಾಗಿ ಆಡಳಿತ ಮತ್ತು ಪ್ರತಿಪಕ್ಷಗಳನಡುವೆ ಪಕ್ಷಾತೀತ ನಿಲುವು ಕಾಯ್ದುಕೊಂಡು, ಎಲ್ಲಾ ಸದಸ್ಯರಿಗೂ ಸಮಾನ ಅವಕಾಶ ಕಲ್ಪಿಸುವ ಮೂಲಕ ಸದನ ವನ್ನು ಸಂಯಮ ಮತ್ತು ಮುತ್ಸದ್ದಿತನದಿಂದ ಮುನ್ನಡೆ ಸಿದ ಅವರ ಕಾರ್ಯವೈಖರಿ ಸ್ಮರಣೀಯ ಎಂದರು.

**ಬಲವಂತದ ರಾಜೀನಾಮೆ**

ಗುಂಡಾಗಿರಿ ಮಾಡಿ ತಮ್ಮ ತಂಡ ಕಟ್ಟಿಕೊಂಡು ಹೋಗಿ ಬಲವಂತವಾಗಿ ಬಸವರಾಜ ಹೊರಟ್ಟಿ ಅವರ ರಾಜೀನಾಮೆ ಕೊಡಿಸಿದ್ದಾರೆ. ಕರ್ನಾಟಕಕ್ಕೆ ಇದು ದೊಡ್ಡ ಕಳಂಕ. ಈ ರೀತಿ ಘಟನೆ ರಾಜ್ಯ ರಾಜಕೀಯದಲ್ಲಿ ಹಿಂದೆ ನಡೆದಿಲ್ಲ. ಮುಂಗಾರು ಅಧಿವೇಶನ ಆರಂಭವಾದ ಬಳಿಕ ರಾಜೀನಾಮೆ ನೀಡಲು ಹೊರಟ್ಟಿ ತೀರ್ಮಾನಿಸಿದ್ದರು. ಆದರೂ ರಾಜೀನಾಮೆಗೆ ಆಗ್ರಹಿಸಿದ್ದು ಏಕೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಪ್ರಶ್ನಿಸಿದ್ದಾರೆ.

### ಸಭಾಪತಿ ಆಯ್ಕೆ ನಿಯಮ ಹೀಗಿದೆ

ಸಭಾಪತಿ ಚುನಾವಣೆಯು ರಾಜ್ಯಪಾಲರು ಗೊತ್ತುಪಡಿಸಿದ ದಿನಾಂಕದಂದು ನಡೆಯುತ್ತದೆ. ಈ ಸಂಬಂಧ ಕಾರ್ಯದರ್ಶಿಗಳು ಪ್ರತಿಯೊಬ್ಬ ಸದಸ್ಯರಿಗೂ ತಿಳಿಸುತ್ತಾರೆ. ಗೊತ್ತುಪಡಿಸಿದ ದಿನಾಂಕದ ಹಿಂದಿನ ದಿನ ಮಧ್ಯಾಹ್ನಕ್ಕೆ ಮೊದಲು ಒಬ್ಬ ಸದಸ್ಯ ಇನ್ನೊಬ್ಬ ಸದಸ್ಯನನ್ನು ಅಧ್ಯಕ್ಷರನ್ನಾಗಿ ಆರಿಸುವ ಬಗ್ಗೆ ಕಾರ್ಯದರ್ಶಿಗೆ ಲಿಖಿತ ಸೂಚನೆಯನ್ನು ನೀಡಬೇಕಾಗಿದೆ. ಈ ಸೂಚನೆಗೆ ಮೂರನೇ ಸದಸ್ಯನು ಅನುಮೋದನೆ ಮಾಡಬೇಕು. ಆದರೆ ಯಾವ ಸದಸ್ಯನೂ ತನ್ನ ಹೆಸರನ್ನು ತಾನೇ ಸೂಚಿಸುವಂತಿಲ್ಲ. ಈ ಕಾರಣದಿಂದ ಹೊರಟ್ಟಿ ಅವರ ರಾಜೀನಾಮೆಯನ್ನು ಕಾಂಗ್ರೆಸ್ ಪಡೆದಿದೆ ಎನ್ನಲಾಗಿದೆ.

# ಗುಂಪುಗಾರಿಕೆ ಮುಕ್ತ ಕಾಂಗ್ರೆಸ್ ಸಾಧ್ಯನಾ?



• ಪ್ರಜೋದಯ ವರದಿ

**ಹಾಸನ :** ಸ್ವತಂತ್ರ ಭಾರತದ ರಾಜಕಾರಣದಲ್ಲಿ ಐದು ದಶಕಗಳ ಕಾಲ ಭಾರತ ಆಳಿದ ಕಾಂಗ್ರೆಸ್ ಈಗ ಮುಪ್ಪಿನ ಹಾದಿ ಹಿಡಿದಿದೆ. ದೇಶದ ನಾಲ್ಕು ರಾಜ್ಯಗಳಲ್ಲಿ ಮಾತ್ರ ಆಡಳಿತದಲ್ಲಿದೆ.ವಿಶೇಷವಾಗಿ ಕರ್ನಾಟಕವನ್ನು ಆಳುವಂತಹವರು ಆ ಪಕ್ಷವನ್ನು ಸಾಕುವ ಅಂದರೆ ಹಣ ನೀಡುವ ಹೊಣೆಗಾರಿಕೆ ನಿಬಾಯಿಸಬೇಕಾಗಿದೆ. ಮುಖ್ಯಮಂತ್ರಿ ಎರಡೂವರೆ ಸಾವಿರ ಕೋಟಿ ರೂಪಾಯಿ ಬಂಡವಾಳವನ್ನು ಕಾಂಗ್ರೆಸ್ ಹೈ ಕಮಾಂಡ್ ಮೇಲೆ ಹೂಡಿ ಅಧಿಕಾರ ಹಿಡಿದಿದ್ದಾರೆಂಬ ಸಂಗತಿ ಪ್ರಸಕ್ತ ಪಕ್ಷದೊಳಗೆ ಹೆಚ್ಚು ಚರ್ಚೆಯಲ್ಲಿರುವ ವಿಚಾರ.

ಕರ್ನಾಟಕ ಕಾಂಗ್ರೆಸ್‌ನಲ್ಲಿ ಸಂಪುಟ ವಿಸ್ತರಣೆ ಕಾರಣಕ್ಕೆ ಉದ್ಭವಿಸಿದ ಬೆಂಕಿ ಜ್ವಾಲೆಯ ಸ್ವರೂಪ ಪಡೆದು ಕೊಳ್ಳಲು ಬಹುದು. ದೇಶ, ರಾಜ್ಯದ ಮಟ್ಟಿಗೆ ಈ ಸ್ಥಿತಿ ಇದ್ದರೆ ಆಯಾಯ ಕಾಲಘಟ್ಟಕ್ಕೆ ಅನುಗುಣವಾಗಿ ಜಿಲ್ಲಾ ಕಾಂಗ್ರೆಸ್‌ಗೆ ಮೆತ್ತಿಕೊಂಡ ಗುಂಪುಗಾರಿಕೆ ಯಾವಾಗ ಬೇಕಾದರೂ ಭುಗಿಲೇಳಬಹುದು.

ಹಾಸನ ಜಿಲ್ಲಾ ಕಾಂಗ್ರೆಸ್ ನಾಯಕತ್ವ ಕಳೆದ ನಾಲ್ಕು ದಶಕಗಳ ಅವಧಿಯಲ್ಲಿ ಎಂದೂ ಒಗ್ಗೂಡಿ ಸಾಗಿದ ನಿದರ್ಶನ ಇಲ್ಲ. ಹೆಚ್.ಸಿ.ಶ್ರೀಕಂಠಯ್ಯ, ಜಿ.ಪುಟ್ಟಸ್ವಾಮಿಗೌಡ, ಹಾರನಹಳ್ಳಿ ರಾಮಸ್ವಾಮಿ, ಕೆ.ಹೆಚ್.ಹನುಮೇಗೌಡ, ಎ.ಮಂಜು, ಬಿ.ಶಿವರಾಮ್ ಹೀಗೆ ಎಲ್ಲರ ಕಾಲ ಘಟ್ಟದಲ್ಲೂ ವಿಭಿನ್ನ ಧ್ವನಿ ನಾಯಕತ್ವಕ್ಕಾಗಿ ಪೈಪೋಟಿ ರೂಢಿಗತವಾಗಿ ಅಂಟಿಕೊಂಡು ಬಂದಿದೆ.

ಸದ್ಯಕ್ಕೆ ನಮ್ಮ ಜಿಲ್ಲೆಯವರಿಗೆ ಅಪರೂಪಕ್ಕೆ ಸಚಿವ ಸ್ಥಾನ ಸಿಕ್ಕಿದೆ ಅನ್ನೊ ಸಮಾಧಾನವಿದ್ದರೂ ಸಚಿವ ಶಿವಲಿಂಗೇಗೌಡ ಅವರು ಈ ಜಗಳಗಂಟಿ ಕಾಂಗ್ರೆಸ್‌ನವರನ್ನು ಹೇಗೆ ಸಂಬಾಳಿಸ್ತಾರೆ. ಅರಸೀಕೆರೆ ಕಾರ್ಯಕರ್ತರನ್ನು ಸರಿದೂಗಿಸಿಕೊಂಡು ಬಂದಂತ ಸಚಿವರಿಗೆ ಎಂಟು ತಾಲ್ಲೂಕಿನವರ ಹಸಿವು ನೀಗಿಸುವುದು ಪರ್ವತ ಏರಿದಷ್ಟೇ ತ್ರಾಸದಾಯಕ. ಶ್ರೀಕಂಠಯ್ಯ, ಪುಟ್ಟಸ್ವಾಮಿಗೌಡ, ಹಾರನಹಳ್ಳಿ ರಾಮಸ್ವಾಮಿ, ಕೆ.ಹೆಚ್.ಹನುಮೇಗೌಡ ಅವರ ಕಾಲದಲ್ಲಿ ಒಬ್ಬರಿಗೊಬ್ಬರು ಮುಖ ಕೊಟ್ಟು ಮಾತನಾಡದಷ್ಟು ಸಂಬಂಧ ಹಳಸಿ ಹೋಗಿತ್ತು. ಕಾಂಗ್ರೆಸ್ ಸಭೆ ಅಂದರೆ ಜಗಳ, ಹೊಡೆದಾಟ ಅಂತಹ ಸನ್ನಿವೇಶಕ್ಕೆ ಬರವೇ ಇರಲಿಲ್ಲ. ಶ್ರೀಕಂಠಯ್ಯ, ಪುಟ್ಟಸ್ವಾಮಿಗೌಡ ಬೀಗರಾದರು. ಆದರೆ, ಇಬ್ಬರ ರಾಜಕೀಯ ಸಂಬಂಧ ಸುಧಾರಿಸಲಿಲ್ಲ. ಇನ್ನು ಹಾಸನ ಕ್ಷೇತ್ರದ ಶಾಸಕರಾಗಿದ್ದ ಹನುಮೇಗೌಡ ಅವರಂತೂ ಬೀಗರಿಬ್ಬರಿಗೂ ಬಗ್ಗಲೇ ಇಲ್ಲ. ಇಬ್ಬರ ವಿರೋಧ ಕಟ್ಟಿಕೊಂಡು ಒಮ್ಮೆ ಸಚಿವರೂ ಆದರು. ಕೊನೆಗೆ ಕಾಂಗ್ರೆಸ್ ಸಹವಾಸವೇ ಬೇಡ ಅಂತ ಬಿಜೆಪಿ ಕಡೆಗೆ ಹೊರಟರು.

ಬೀಗರಿಬ್ಬರ ಅಗಲಿಕೆಯ ನಂತರ ಬಿ.ಶಿವರಾಮ್-ಎ.ಮಂಜು ಸರದಿ ಬಂತು. ಈ ಇಬ್ಬರು ಒಟ್ಟಿಗೆ ಹೋಗಲಿಕ್ಕೆ ಸಾಧ್ಯ ಆಗಲಿಲ್ಲ. ಬಿ.ಶಿವರಾಮ್ ವಿಧಾನಸಭೆ ಪ್ರವೇಶ ಮಾಡದ ಫಲವಾಗಿ ಎ.ಮಂಜು ಕಾಂಗ್ರೆಸ್ ಹೈಕಮಾಂಡ್ ನೆರವಿನೊಂದಿಗೆ ಸಚಿವರಾಗುವಂತಾಯಿತು.

ಈಗ ಬಿ.ಶಿವರಾಮ್, ಕೆ.ಎಂ.ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್ ಹಾಸನ ಜಿಲ್ಲಾ ಕಾಂಗ್ರೆಸ್‌ನ ಮುಂಚೂಣಿ ನಾಯಕರು ಶಿವಲಿಂಗೇಗೌಡ ಅವರಿಗೆ ಮಂತ್ರಿ ಸ್ಥಾನ ಪಡೆದು ಕೊಳ್ಳುವಲ್ಲಿ ಶ್ರೇಯಸ್ ಪಾತ್ರ ಬಹಳಷ್ಟು ಇದೆ. ಶಿವಲಿಂಗೇಗೌಡ ಅವರು ಬಹಿರಂಗವಾಗಿಯೇ ಕೃತಜ್ಞತೆ ಸಲ್ಲಿಸಿದ್ದಾರೆ.

ಹಾಸನ ಜಿಲ್ಲಾ ಕಾಂಗ್ರೆಸ್ ಮುಖಂಡರ ಗುಂಪುಗಾರಿಕೆಗೆ ಈಗಲಾದರೂ ಬ್ರೇಕ್ ಬೀಳುತ್ತಾ, ಇಲ್ಲ ಪರಸ್ಪರ ಬಡಿದಾಡಿ ಕೊಳ್ಳೊದರಲ್ಲೇ ಸರ್ಕಾರದ ಅವಧಿ ಮುಗಿದು ಸಾಮಾನ್ಯ ಕಾರ್ಯಕರ್ತರು ಬೀದಿಲಿ ಉಗಿಯೋ ತರ ಮಾಡ್ಕೊತರಾ ಅಂತ ಕಾದು ನೋಡಬೇಕು.

## 60 ಗ್ರಾಂ ತೂಕದ ಚಿನ್ನದ ಸರ ಅಪಹರಣ

• ಪ್ರಜೋದಯ ವರದಿ

**ಹಾಸನ:** ಪ್ರಯಾಣಿಕರ ನೂಕುನುಗ್ಗಲಿನ ನಡುವೆ ಮಹಿಳೆಯ ಗಮನ ಬೇರೆಡೆ ಸೆಳೆದ ಇಬ್ಬರು ಅಪರಿಚಿತ ಮಹಿಳೆಯರು 60 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ದೋಚಿರುವ ಘಟನೆ ನಗರದ ಸುಬೇದಾರ್ ವೃತ್ತದಲ್ಲಿ ನಡೆದಿದೆ.

ಜಯನಗರ 2ನೇ ಹಂತದ ನಿವಾಸಿ ಭಾಗ್ಯಲಕ್ಷ್ಮಿ ಚಿನ್ನಾಭರಣ ಕಳೆದುಕೊಂಡವರು. ಕಾರ್ಯನಿಮಿತ್ತ ನಗರಕ್ಕೆ ಬಂದಿದ್ದ ಅವರು ನಗರ ಸಾರಿಗೆ ಬಸ್ ನಿಲ್ದಾಣದಿಂದ ದಾಸರಕೊಪ್ಪಲು ಬಸ್‌ನಲ್ಲಿ ಹೋಗುತ್ತಿದ್ದಾಗ ಕಳ್ಳತವಾಗಿದೆ. ಸೀಟ್ ಮೇಲೆ ಕುಳಿತಿದ್ದ ಭಾಗ್ಯಲಕ್ಷ್ಮಿ ಅವರಿಗೆ ಮಹಿಳೆ ಯೊಬ್ಬರು ತಮ್ಮ ಮಗುವನ್ನು ಕೊಟ್ಟಿದ್ದಾರೆ. ಸುಬೇದಾರ್ ವೃತ್ತದ ಸಮೀಪ ಬಸ್ ನಿಲ್ಲುತ್ತಿದ್ದಂತೆ ಮಗುವನ್ನು ವಾಪಾಸ್ ಪಡೆಯುವ ನೆಪದಲ್ಲಿ ಚಿನ್ನದ ಸರವನ್ನು ಎಗರಿಸಿ ಇಳಿದಿದ್ದಾರೆ. ನಂತರ ಭಾಗ್ಯಲಕ್ಷ್ಮಿ ಅವರು ತಮ್ಮ ನಿಲುಗಡೆ ಬಂದಾಗ ಬಸ್ ಇಳಿದು ನೋಡಿಕೊಂಡಾಗ ಸರ ನಾಪತ್ತೆ ಯಾಗಿರುವುದು ತಿಳಿದಿದೆ. ಅಪರಿಚಿತ ಇಬ್ಬರು ಮಹಿಳೆಯರೇ ಮಗುವನ್ನು ವಾಪಾಸ್ ಪಡೆ ಯುವಾಗ ಕೃತ್ಯ ಎಸಗಿದ್ದಾರೆಂದು ಭಾಗ್ಯಲಕ್ಷ್ಮಿ ಅವರು ಆರೋಪಿಸಿದ್ದಾರೆ. ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸ್ಪರ್ಧಾಕಾಂಕ್ಷಿಗಳಿಗೆ ಜಿಲ್ಲಾಧಿಕಾರಿ ಸಲಹೆ | ಒಂದು ದಿನದ ಕಾರ್ಯಾಗಾರ

# ಸರ್ಕಾರಿ ನೌಕರಿ ಪಡೆಯಲು ಕಠಿಣ ಪರಿಶ್ರಮ ಬೇಕು

• ಪ್ರಜೋದಯ ವರದಿ

**ಹಾಸನ:** ಸರ್ಕಾರಿ ನೌಕರಿ ಪಡೆಯುವುದನ್ನು ಕೇವಲ ಕನಸಾಗಿಸದೆ ನನಸು ಮಾಡಿಕೊಳ್ಳಬೇಕೆಂದರೆ ಕಠಿಣ ಪರಿಶ್ರಮ, ತಾಳ್ಮೆ ಹಾಗು ಛಲ ಬೇಕಾಗುತ್ತದೆಂದು ಜಿಲ್ಲಾಧಿಕಾರಿ ಕೆ. ಎಸ್.ಲತಾಕುಮಾರಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಸಾರ್ವಜನಿಕ ಗ್ರಂಥಾಲಯ ಹಾಗು ಭಾರತೀಯ ವಿದ್ಯಾರ್ಥಿ ಸಂಘದಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಶುಕ್ರವಾರ ಏರ್ಪಡಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಕುರಿತ ಒಂದು ದಿನದ ಉಚಿತ ಕಾರ್ಯಾಗಾರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಮಾರ್ಗದರ್ಶಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಯುಗದಲ್ಲಿ ಸರ್ಕಾರಿ ಉದ್ಯೋಗ ಪಡೆಯುವುದು ಸುಲಭದ ಮಾತಲ್ಲ. ಸ್ಪಷ್ಟ ಗುರಿ, ಗುಣಮಟ್ಟದ ಶಿಕ್ಷಣ, ನಿರಂತರ ಅಧ್ಯಯನ, ಸಮಯದ ಸಮರ್ಪಕ ನಿರ್ವಹಣೆ ಹಾಗು ಆತ್ಮವಿಶ್ವಾಸ ಇದ್ದಾಗ ಮಾತ್ರ ಯಶಸ್ಸು ಸಾಧ್ಯ ಎಂದರು.



ಪ್ರಸ್ತುತ ದಿನಗಳಲ್ಲಿ ಸರ್ಕಾರಿ ಉದ್ಯೋಗಗಳಿಗೆ ತೀವ್ರ ಸ್ಪರ್ಧೆ ಇದೆ. ಶಿಕ್ಷಣ ಪೂರ್ಣಗೊಳಿಸಿದ ಪ್ರತಿಯೊಬ್ಬರಿಗೂ ಉದ್ಯೋಗ ಸಿಗುವುದಿಲ್ಲ. ಒಂದು ಹುದ್ದೆಗೆ ನೂರಾರು ಅಭ್ಯರ್ಥಿಗಳು ಅರ್ಜಿ ಸಲ್ಲಿಸುತ್ತಿದ್ದು, ಪ್ರತಿಭೆ ಮತ್ತು ಪರಿಶ್ರಮ ಇರುವವರೇ ಯಶಸ್ಸು ಸಾಧಿಸುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ಶಾಲಾ ಹಂತದಿಂದಲೇ ತಮ್ಮ ಗುರಿ ನಿಗದಿಪಡಿಸಿ ಅದಕ್ಕೆ ತಕ್ಕಂತೆ ಸಿದ್ಧತೆ ಆರಂಭಿಸಬೇಕೆಂದು ಸಲಹೆ ನೀಡಿದರು.

ಹತ್ತನೇ ತರಗತಿ ಮುಗಿಯುವಷ್ಟರಲ್ಲಿ ಭಾಷೆಯ ಮೇಲಿನ ಹಿಡಿತ, ಪಿಯುಸಿ ಹಂತಕ್ಕೆ ಬಂದಾಗ ಓದುವ ವಿಧಾನದಲ್ಲಿ ಬದಲಾವಣೆ ಮಾಡಿಕೊಂಡು, ಕೇವಲ ಅಂಕಗಳಿಗಾಗಿ ಅಲ್ಲ, ಭವಿಷ್ಯದ ಗುರಿ ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಬೇಕು. ಪದವಿ ಎಂಬುದು ಉದ್ಯೋಗ ಮತ್ತು ಜೀವನದ ಗುರಿ ಸಾಧನೆಗೆ ನೆರವಾಗುವ ಸಾಧನವಾಗಬೇಕೆಂದರು.

ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದ ತಕ್ಷಣ ಅವಕಾಶಗಳು ನಮ್ಮನ್ನು ಹುಡುಕಿ ಕೊಂಡು ಬರುವುದಿಲ್ಲ. ನಾವು ಅವಕಾಶಗಳನ್ನು ಹುಡುಕಿಕೊಂಡು ಹೋಗಬೇಕು. ಆತ್ಮವಿಶ್ವಾಸದಿಂದ ಪ್ರಯತ್ನಿಸಿದವರಿಗೆ ಮಾತ್ರ ಯಶಸ್ಸು ಸಿಗುತ್ತದೆ ಎಂದರು.

ಸರ್ಕಾರಿ ಉದ್ಯೋಗ ಪಡೆಯುವ ಕನಸು ಹೊಂದಿರುವ ವಿದ್ಯಾರ್ಥಿಗಳಿಗೆ ಇದು ಉತ್ತಮ ಅವಕಾಶವಾಗಿದ್ದು, ಈಗಿನಿಂದಲೇ ಪರೀಕ್ಷೆಗಳ ಸಿದ್ಧತೆ ಆರಂಭಿಸಬೇಕು. ದೇಶದಲ್ಲಿ ಪ್ರತಿವರ್ಷ ಕೋಟ್ಯಾಂತರ ವಿದ್ಯಾರ್ಥಿಗಳು ವಿವಿಧ ಪದವಿಗಳೊಂದಿಗೆ ಹೊರಬರುತ್ತಿದ್ದು, ಕೇವಲ ಪದವಿ ಹೊಂದಿದರಷ್ಟೇ ಸಾಕಾಗುವುದಿಲ್ಲ. ಹೆಚ್ಚುವರಿ ಜ್ಞಾನ, ಕೌಶಲ್ಯ ಹಾಗು ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆ ಅತ್ಯಗತ್ಯವಾಗಿದೆ ಎಂದು ಹೇಳಿದರು.

ಇಂದಿನ ಯುವಜನತೆ ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸಮಯ ವ್ಯರ್ಥ » ನಾಲ್ಕನೇ ಪುಟದಲ್ಲಿ

## ಇಂದು ಬೇಲೂರಿನಲ್ಲಿ ಪತ್ರಿಕಾ ದಿನಾಚರಣೆ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಆ.8ರ ಶನಿವಾರ ತಾಲ್ಲೂಕು ಮಟ್ಟದ ಪತ್ರಿಕಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ಪಟ್ಟಣದ ಆರ್.ವಿ.ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಲಿರುವ ಸಮಾರಂಭವನ್ನು ಬೆಳಿಗ್ಗೆ 11 ಗಂಟೆಗೆ ಶಾಸಕ ಹೆಚ್.ಕೆ. ಸುರೇಶ್ ಉದ್ಘಾಟಿಸುವರು. ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಆಶಯ ನುಡಿಗಳನ್ನಾಡುವರು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಪಿ.ಎಸ್.ಪ್ರಮೋದ್ ಪಾಲ್ಗೊಳ್ಳುವರು.

ಕ್ರೀಡಾಪಟುಗಳಿಗೆ ಮಾಜಿ ಸಚಿವ ಬಿ.ಶಿವರಾಮ್ ಬಹುಮಾನ ವಿತರಿಸುವರು. ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜ್, ಉದ್ಯಮಿ ಗ್ರಾನೈಟ್ ರಾಜಶೇಖರ್, ಪುರಸಭೆ ಅಧ್ಯಕ್ಷ ಅಕ್ರಂ ಶರೀಫ್, ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ತಾಲ್ಲೂಕು ಪಂಚಾಯಿತಿ ಇಒ ಸತೀಶ್, ಪುರಸಭೆ ಮುಖ್ಯಾಧಿಕಾರಿ ಬಸವರಾಜ ಟಾಕಪ್ಪಶಿಗ್ಗಾವಿ, ಪೊಲೀಸ್ ಇನ್ಸ್‌ಪೆಕ್ಟರ್ ರೇವಣ್ಣ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿದ ಕೇಂದ್ರ ಸರ್ಕಾರ

• ಪ್ರಜೋದಯ ವರದಿ

**ಸಕಲೇಶಪುರ:** ಕೇಂದ್ರ ಸರ್ಕಾರ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿದ್ದು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ನಿಜಬಣ್ಣ ಬಯಲಾಗುತ್ತಿದೆ ಎಂದು ತಮಿಳು ನಾಡಿನ ಸಂಸದೆ ಹಾಗು ಎಐಸಿಸಿ ವೀಕ್ಷಕಿ ಆರ್.ಸುಧಾ ಅವರು ವಾಗ್ದಾಳಿ ನಡೆಸಿದರು.



ಪಟ್ಟಣದ ರೈತ ಭವನದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಸಂಘಟನ್ ಸೃಜನ್ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಸಿಜೆಪಿ ನಡೆಸಿದ ಹೋರಾಟವೇ ಕೇಂದ್ರದ ವೈಫಲ್ಯಕ್ಕೆ ಸಾಕ್ಷಿ. ಕಳೆದ 12 ವರ್ಷಗಳಿಂದ ನಿರಂತರ ಭ್ರಷ್ಟಾಚಾರವೇ ಮೋದಿ ಸಾಧನೆ. ಕೇಂದ್ರ ಸರ್ಕಾರದ ಮತ್ತಷ್ಟು ಅಕ್ರಮಗಳನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಬಯಲಿಗೆಳೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡುವ ಪರಿಸ್ಥಿತಿ ನಿರ್ಮಾಣವಾ ಗಲಿದೆ ಎಂದು ಭವಿಷ್ಯ ನುಡಿದರು.

ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಬಲಪಡಿಸುವ ಉದ್ದೇಶದಿಂದ ಎಐಸಿಸಿ ದೇಶಾದ್ಯಂತ ಅಭಿಯಾನ ಹಮ್ಮಿಕೊಂಡಿದೆ. ಅದರ ಅಂಗವಾಗಿ ಪಕ್ಷದ ಕಾರ್ಯಕರ್ತರು, ಮುಖಂಡರು ಹಾಗು ಪಕ್ಷದಿಂದ ರಾಜಕೀಯ ಸ್ಥಾನಮಾನ ಪಡೆದವರ ಅಭಿ ಪ್ರಾಯಗಳನ್ನು ಸಂಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿ (ಡಿಸಿಸಿ) ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಕರ್ನಾಟಕಕ್ಕೆ ಇದು ತಮ್ಮ ಮೂರನೇ ಭೇಟಿ. ಈ ಹಿಂದೆ ಯುವ ಕಾಂಗ್ರೆಸ್ ಸಂಘಟನೆಯ ಜವಾಬ್ದಾರಿಗಳ ಹಿನ್ನಲೆಯಲ್ಲಿ ಎರಡು ಬಾರಿ ಆಗಮಿಸಿದ್ದೆ. ಇದೀಗ ಎಐಸಿಸಿ ಪರ ವಾಗಿ ವೀಕ್ಷಕರಾಗಿ ಬಂದಿದ್ದು, ಜಿಲ್ಲೆಯ ಮುಖಂಡರು ಹಾಗು ಕಾರ್ಯಕರ್ತರ ಅಭಿಪ್ರಾಯ, ಸಲಹೆ ಮತ್ತು ಸೂಚನೆಗಳನ್ನು ಸಂಗ್ರಹಿಸಿ ಸಮಗ್ರ ವರದಿಯನ್ನು ಎಐಸಿಸಿ ನಾಯಕತ್ವಕ್ಕೆಸಲ್ಲಿಸಲಾಗುವುದು. ಅದರ ಆಧಾರದ ಮೇಲೆ ಡಿಸಿಸಿ ಅಧ್ಯಕ್ಷರ ಆಯ್ಕೆಯನ್ನು ಹೈಕಮಾಂಡ್ ಅಂತಿಮಗೊಳಿಸಲಿದೆ ಎಂದು ತಿಳಿಸಿದರು.

**ಆರು ಜನರ ಹೆಸರು ಶಿಫಾರಸ್ಸು**

ಡಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಆಸಕ್ತಿ ಹೊಂದಿರುವ ಎಲ್ಲಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸ ಬಹುದಾಗಿದೆ. ಆಯ್ಕೆ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕ, ನ್ಯಾಯಸಮ್ಮತ ಹಾಗು ಪ್ರಜಾಪ್ರಭುತ್ವದ ಮೌಲ್ಯಗಳ ಆಧಾರದ ಮೇಲೆ ನಡೆಯಲಿದ್ದು, ಜಿಲ್ಲೆಯ ಮಟ್ಟದಿಂದ ಆರು ಹೆಸರು ಗಳನ್ನು ಹೈಕಮಾಂಡ್‌ಗೆ ಶಿಫಾರಸ್ಸು ಮಾಡುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಹೇಳಿದರು. ಕಾಂಗ್ರೆಸ್ ಪಕ್ಷವನ್ನು ಇನ್ನಷ್ಟು ಸದೃಢಗೊಳಿಸುವುದು, ಜನರೊಂದಿಗೆ ನಿಕಟ ಸಂಪರ್ಕ ಹೊಂದಿರುವ ಸಮರ್ಥ ಹಾಗೂ ಜನಪರ ನಾಯಕತ್ವವನ್ನು ಗುರುತಿಸಿ ಜವಾಬ್ದಾರಿ ನೀಡುವುದು ಈ ಅಭಿಯಾನದ ಪ್ರಮುಖ ಉದ್ದೇಶವಾಗಿದೆ. ದೇಶದ ಬಹುತೇಕ ರಾಜ್ಯಗಳಲ್ಲಿ ಈ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಪ್ರಸ್ತುತ ಕರ್ನಾಟಕ, ಪುದುಚೇರಿ ಹಾಗು ಅಂಡಮಾನ್-ನಿಕೋಬಾರ್ ಸೇರಿ ಕೆಲವೇ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುತ್ತಿದೆ ಎಂದರು.

ಪಕ್ಷದ ಮುಖಂಡ ಮುರಳಿ ಮೋಹನ್ ಅವರು ಮಾತನಾಡಿ, ಪಕ್ಷದಲ್ಲಿ ಸಣ್ಣಪುಟ್ಟ ಮನಸ್ತಾ ಪಗಳು ಸಹಜ. ಅವುಗಳನ್ನು ಬದಿಗಿಟ್ಟು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಯಾರೇ ಅಭ್ಯರ್ಥಿಯಾದರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕೆಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣ್, ಚಿಕ್ಕಮಗಳೂರು ಜಿಲ್ಲಾಧ್ಯಕ್ಷ ವಿಜಯಕುಮಾರ್, ಸಕಲೇಶಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೈರಮುಡಿ ಚಂದ್ರು, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನ್ನಪೂರ್ಣ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ರಂಜಿತ್ ಗೊರೂರು, ಕೆಪಿಸಿಸಿ ವೀಕ್ಷಕರ ಶಶಿಧರ್, ಕೆಪಿಸಿಸಿ ಸದಸ್ಯ ಸಲೀಂ ಕೊಲ್ಲಹಳ್ಳಿ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸೈಯದ್ ಮುಫೀಜ್ ಮತ್ತಿತರರಿದ್ದರು.

## ನೀರಗುಂದದಲ್ಲಿ ಹೊಯ್ಸಳರ ಕಾಲದ ವೀರಗಲ್ಲು ಪತ್ತೆ

• ಪ್ರಜೋದಯ ವರದಿ

**ಹಾಸನ:** ಹೊಯ್ಸಳ ಸಾಮ್ರಾಟ ವಿಷ್ಣುವರ್ಧನನ ಕುರಿತು ಮಾಹಿತಿ ಒದಗಿಸುವ ವೀರಗಲ್ಲು (ವೀರಶಿಲೆ) ಅರಸೀಕೆರೆ ತಾಲ್ಲೂಕಿನ ನೀರಗುಂದ ಗ್ರಾಮದಲ್ಲಿ ಪತ್ತೆಯಾಗಿದೆ.

ವೀರಗಲ್ಲಿನ ಮೇಲಿರುವ ಕನ್ನಡ ಶಾಸನವು ವಿಷ್ಣುವರ್ಧನ ಅವರ ಮರಣದ ದಿನಾಂಕ ಮತ್ತು ಕೊನೆಯ ದಿನಗಳ ಕುರಿತು ಉಲ್ಲೇಖ ಹೊಂದಿರುವುದರಿಂದ ದಶಕಗಳಿಂದ ಇದ್ದ ಗೊಂದಲಕ್ಕೆ ಸ್ಪಷ್ಟನೆ ನೀಡುವ ಮಹತ್ವದ ದಾಖಲೆ ಎನ್ನಲಾಗುತ್ತಿದೆ.

ನೀರಗುಂದ ಗ್ರಾಮದಲ್ಲಿರುವ ಹೊಯ್ಸಳ ಕಾಲದ ಮಲ್ಲೇಶ್ವರ ಹಾಗು ಲಕ್ಷ್ಮೀನಾರಾಯಣ ಸ್ವಾಮಿ ದೇವಾಲಯಗಳಲ್ಲಿ ಲಕ್ಷ್ಮೀನಾರಾಯಣ ದೇವಾಲಯ ಶಿಥಿಲಾವಸ್ಥೆಗೆ ತಲುಪಿದ್ದ ಹಿನ್ನಲೆಯಲ್ಲಿ ಗ್ರಾಮಸ್ಥರು ಸಾರ್ವಜನಿಕರ ಸಹಕಾರದೊಂದಿಗೆ ಪುನರುಜ್ಜೀವನ ಕಾಮಗಾರಿ ಆರಂಭಿಸಿದ್ದರು. ಜೂ.28ರಂದು ಅಡಿಪಾಯ ಕಾಮಗಾರಿ ವೇಳೆ ಎರಡು ಪ್ರಾಚೀನ ಕಲ್ಲಿನ ಫಲಕಗಳು ಪತ್ತೆಯಾಗಿದ್ದು, ಅವುಗಳಲ್ಲಿ ಒಂದರಲ್ಲಿ ಶಾಸನವಿರುವುದು ಗಮನ ಸೆಳೆದಿದೆ.



ಹೊಯ್ಸಳ ವಾಸ್ತುಶಿಲ್ಪದ ಅಧ್ಯಯನದಲ್ಲಿ ತೊಡಗಿರುವ ಸಂಶೋಧಕ ಹೆಚ್.ಜಿ.ಶಶಿಧರ್ ಅವರು ಸ್ಥಳಕ್ಕೆ ಭೇಟಿ ನೀಡಿ ಎರಡೂ ಕಲ್ಲುಗಳು ವೀರಗಲ್ಲುಗಳು ಎಂದು ಗುರುತಿಸಿದ್ದಾರೆ. ಅವು ಗಳಲ್ಲಿ ಒಂದರ ಮೇಲಿರುವ ಪ್ರಾಚೀನ ಕನ್ನಡ ಶಾಸನವನ್ನು ಓದಿ ಇತರೆ ತಜ್ಞರೊಂದಿಗೆ ಪರಿ ಶೀಲಿಸಿದ ಬಳಿಕ, ಅದು ನೀರಗುಂದದ ಮಾರವ್ವೆ ಎಂಬ ಮಹಿಳೆ ತನ್ನ ಪತಿ ಹಾಗು ಸೈನಿಕನಾಗಿದ್ದ ಬೊಪ್ಪನ ಸ್ಮರಣಾರ್ಥ ಸ್ಥಾಪಿಸಿದ ವೀರಗಲ್ಲು ಎಂದು ತಿಳಿದುಬಂದಿದೆ.

ಶಾಸನದ ಪ್ರಕಾರ, ಹೊಯ್ಸಳ ರಾಜ ವಿಷ್ಣುವರ್ಧನ ಅವರು ಬಂಕಾಪುರದಲ್ಲಿ ನಿಧನರಾದ ಬಳಿಕ, ಬೊಪ್ಪ ಯುದ್ಧದಲ್ಲಿ ಪ್ರಾಣತ್ಯಾಗ ಮಾಡಿದ್ದಾನೆಂದು ಉಲ್ಲೇಖಿಸಲಾಗಿದೆ. ಶಾಸನದಲ್ಲಿರುವ ದಿನಾಂಕವು ದುರ್ಮತಿ ಸಂವತ್ಸರ, » ನಾಲ್ಕನೇ ಪುಟದಲ್ಲಿ

## ಎಸ್‌ಐಆರ್: ಮತ್ತೆ ಅವಧಿ ವಿಸ್ತರಣೆ

• ಪ್ರಜೋದಯ ವರದಿ

**ಬೆಂಗಳೂರು:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್ ಐಆರ್) ಸಂಬಂಧಿಸಿ ಭರ್ತಿ ಮಾಡಿರುವ ಗಣತಿ ನಮೂನೆಗಳನ್ನು ಸಲ್ಲಿಸುವ ಅವಧಿಯನ್ನು ಆ.17ರವರೆಗೆ ವಿಸ್ತರಿಸಲಾಗಿದೆ.

ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ 2026ರ ಕಾರ್ಯ ಪ್ರಗತಿಯಲ್ಲಿದ್ದು, ಪರಿಷ್ಕೃತ ವೇಳಾಪಟ್ಟಿಯನ್ನು ಪ್ರಕಟಿ ಸಲಾಗಿದೆ. ಅದರಂತೆ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ಭೇಟಿ ಹಾಗು ದಾಖಲೆ ಸಂಗ್ರ ಹಿಸುವ ಕಾರ್ಯ ಜೂ.30ರಂದು ಆರಂಭವಾಗಿದ್ದು, ಆ.17ರ ವರೆಗೆ ನಡೆಯಲಿದೆ.

## ಹಾಲು ಉತ್ಪಾದನೆ ಹೆಚ್ಚಳಕ್ಕೆ ಹಾಮೂಲ್ ಯೋಜನೆ | 25 ಸಾವಿರ ಹೈನುಗಾರರ ಸೃಜಿಸುವ ಗುರಿ

# ಹಸು ಖರೀದಿಗೆ ಸಾಲ ವಿತರಣೆ ಪ್ರಯೋಗ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಹೈನುಗಾರಿಕೆಯಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಮುಂದಾಗಿರುವ ಹಾಸನ ಹಾಲು ಉತ್ಪಾದಕರ ಸಹಕಾರ ಸಂಘವು ಹೊಸದಾಗಿ 25 ಸಾವಿರ ಹೈನುಗಾರರ ಹುಟ್ಟುಹಾಕಿ ಹಾಲು ಉತ್ಪಾದನೆ ಗುರಿಯನ್ನು 20 ಲಕ್ಷ ಲೀಟರ್‌ಗೆ ಹೆಚ್ಚಿ ಸುವ ಯೋಜನೆ ಹಾಕಿಕೊಂಡಿದೆ.

ಪ್ರಸ್ತುತ ಪ್ರತಿದಿನ 16.50 ಲ.ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಅದನ್ನು ಮುಂದಿನ ಒಂದು ವರ್ಷದಲ್ಲಿ 20 ಲ. ಲೀ.ಗೆ ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ. ಅದಕ್ಕಾಗಿ ಹಸು ಖರೀದಿ ಸಾಲ ಯೋಜನೆಯನ್ನು ಪರಿಚಯಿಸಲಾಗಿದೆ. ಕೃಷಿ ಜೊತೆಗೆಹೈನುಗಾರಿಕೆಯನ್ನುಉಪಕಸುಬಾಗಿ ಮಾಡಿಕೊಂಡಿರುವ ರೈತರು ಆರ್ಥಿಕವಾಗಿಸದೃಢರಾಗಲು ಯೋಜನೆ ಸಹಕಾರಿ ಎಂದು ವಿಶ್ಲೇಷಿಸ ಲಾಗಿದೆ.

**ಏನಿದು ಹಸು ಖರೀದಿ ಯೋಜನೆ**

ಹಾಸನ ಹಾಲು ಉತ್ಪಾದಕರ ಸಹಕಾರ ಸಂಘದ ವ್ಯಾಪ್ತಿಯಡಿ ಚಿಕ್ಕಮಗಳೂರು, ಮಡಿಕೇರಿ ಹಾಗು ಹಾಸನ ಜಿಲ್ಲೆಯ ಡೇರಿಗಳು ಒಳಪಡುತ್ತವೆ.



ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಆರಂಭಿಕವಾಗಿ ಹಾಸನ ಜಿಲ್ಲೆಯ ರೈತರಿಗೆ ಹಸು ಖರೀದಿ ಸಾಲ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಅಂದಾಜು 1 ಲಕ್ಷ ಹೈನುಗಾರರು ಜಿಲ್ಲೆಯಲ್ಲಿದ್ದು ಆ ಪೈಕಿ 25 ಸಾವಿರ ರೈತರಿಗೆ ಸಾಲ ಮಂಜೂರು ಮಾಡಲು ನಿರ್ಧರಿಸಲಾಗಿದೆ. ಸಾಂಕೇತಿಕವಾಗಿ 927 ಹೈನುಗಾರರಿಗೆ ಮಂಜೂರಾತಿ ಪತ್ರ ವಿತರಿಸಲಾಗಿದೆ. ಹೆಚ್‌ಡಿಸಿಸಿ ಬ್ಯಾಂಕ್ ನೆರವಿನೊಂದಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ.

ಹಸು ಖರೀದಿಸಲು ಬಯಸುವ ಹೈನುಗಾರರಿಗೆ 2 ರಿಂದ 3 ಲಕ್ಷ ರೂ. ಸಾಲ ನೀಡಲಾಗುತ್ತದೆ. ಯೋಜನೆಯಡಿ ಖರೀದಿಸಿದ ಹಸುವಿಗೆ ಶೇ.40 ರಷ್ಟು ಡೇರಿ ಹಾಗು ಶೇ.40 ರಷ್ಟು ವಿಮೆಯನ್ನು ಬ್ಯಾಂಕ್ ಪಾವತಿಸುತ್ತದೆ. ಉಳಿದ ಶೇ.20ರ ಕಂತನ್ನು ರೈತರೇ ಪಾವ ತಿಸಬೇಕು. ಅನಾರೋಗ್ಯ ಮತ್ತಿತರ ಕಾರಣಗ ಳಿಂದ ಹಸು ಮೃತಪಟ್ಟರೆ 75 ಸಾವಿರ ರೂ. ಪರಿಹಾರ ನೀಡಲಾಗು ತ್ತದೆ. ಒಬ್ಬ ರೈತ 3 ಹಸು ಖರೀದಿ ಸುವ ಅವಕಾಶಗಳಿವೆ.

**ಫಲಾನುಭವಿಗೆ ಇರಬೇಕಾದ ಅರ್ಹತೆ**

ಹಸು ಖರೀದಿ ಸಾಲ ಯೋಜನೆಯ ಫಲಾನುಭವಿ ಆಗಬೇಕೆಂದರೆ ಡೇರಿಗೆ ಹಾಲು ಹಾಕುತ್ತಿರಬೇಕು. ಹೊಸದಾಗಿ ಹೈನುಗಾರಿಕೆ ಪ್ರಾರಂಭಿಸುವವರಿದ್ದರೆ ಗ್ರಾಮದ ವಾಸಸ್ಥಳ ದೃಢೀಕರಣ ಹೊಂದಿರಬೇಕು. ಜಮೀನು ಇಲ್ಲದೆ ಇರುವವರಿಗೆ 1 ಲಕ್ಷ ರೂ. ವರೆಗೆ ಸಾಲ ನೀಡಲಾಗುತ್ತದೆ. ಈ ಸಾಲ ಪಡೆದವರು ತಿಂಗಳಿಗೆ 3600 ರೂ. ಕಂತು ಪಾವತಿಸಬೇಕಾಗುತ್ತದೆ. ಶೇ.10.50 ರಷ್ಟು ಬಡ್ಡಿ ವಿಧಿಸಲಾಗುತ್ತದೆ. ಸಾಲಗಾರರಿಗೆ ಮತ್ತೊಬ್ಬ ಹಾಲು ಉತ್ಪಾದಕರೇ ಶೂರಿಟಿ ಆಗಿರುತ್ತಾರೆ. ಇನ್ನು 3 ಲಕ್ಷ ರೂ. ಸಾಲ ಪಡೆಯಲು ಇಚ್ಛಿಸುವವರು ತಮ್ಮ 20 ಗುಂಟೆ ಜಮೀನನ್ನು ಶೂರಿಟಿ ಯಾಗಿ ನೀಡಬೇಕು. ಇವರಿಗೆ 3.50 ರೂ. ಬಡ್ಡಿ ನಿಗದಿಪಡಿಸಿದ್ದು ಪ್ರತಿ ಆರು ತಿಂಗಳಿಗೆ ಒಮ್ಮೆಯಂತೆ ಕಂತು ಪಾವತಿಸಹಬುದು ಅಥವಾ ತಿಂಗಳಿಗೆ ಕಟ್ಟುವ ವ್ಯವಸ್ಥೆಯನ್ನಾದರೂ ಮಾಡಿಕೊಳ್ಳಬಹುದು.

**ಹಸು ಖರೀದಿಗೆ ಸಮಿತಿ ರಚನೆ**

ಹೆಚ್‌ಡಿಸಿಸಿ ಬ್ಯಾಂಕ್ ಮೂಲಕ ಸಾಲ ನೀಡಲಾಗುತ್ತದೆಯಾದರೂ ಹಣವನ್ನು ಹೈನುಗಾರರಿಗೆ ನೇರವಾಗಿ ನೀಡುವುದಿಲ್ಲ. ಅದಕ್ಕಾಗಿಯೇ ಸಮಿತಿ ರಚಿಸಲಾಗಿದೆ. ಹಾಲಿನ ಡೇರಿ ಕಾರ್ಯದರ್ಶಿ, ಪಶು ವೈದ್ಯಾಧಿಕಾರಿ, ಗ್ರಾಮದ ಮುಖಂಡರು, ಬ್ಯಾಂಕ್ ಅಧಿಕಾರಿಯನ್ನು ಒಳಗೊಂಡ ಸಮಿತಿಯು ಪರಿಶೀಲಿಸಿ ಫಲಾನುಭವಿಗಳ ಆಯ್ಕೆ ಮಾಡುತ್ತದೆ. ಹಾಸನ ಅಥವಾ ಹೊರ ಜಿಲ್ಲೆಗಳಲ್ಲಿ ಹಸುಗಳನ್ನು ಖರೀದಿಸಿ ಅವುಗಳನ್ನು ರೈತರಿಗೆ ಹಸ್ತಾಂತರಿಸಲಾಗುತ್ತದೆ. ಜಿಲ್ಲೆ ಹೈನುಗಾರಿಕೆಯಲ್ಲಿ ದ್ವಿತೀಯ ಸ್ಥಾನದಲ್ಲಿದ್ದು ಮೊದಲ ಸ್ಥಾನಕ್ಕೇರಲು ಹಾಮೂಲ್ ಅವಿರತ ಶ್ರಮ ಹಾಕುತ್ತಿದೆ.

ಪ್ರಸ್ತುತ ಆಲೂರು ತಾಲ್ಲೂಕಿನಲ್ಲಿ 30,321, ಅರಕಲಗೂಡು 80,102, ಅರಸೀಕೆರೆ 94,318, ಬೇಲೂರು58,464,ಚನ್ನರಾಯಪಟ್ಟಣ 110,603, ಹಾಸನ 96,034, ಹೊಳೆನರಸೀಪುರ 67,262 ಹಾಗು ಸಕಲೇಶಪುರದಲ್ಲಿ 23,933 ರಾಸುಗಳಿವೆ.

# ಕಾವೇರಿ: ಸಂಘರ್ಷದಿಂದ ಪರಿಹಾರವಿಲ್ಲ, ವೈಜ್ಞಾನಿಕ ಜಲಾಡಳಿತದಿಂದ ನ್ಯಾಯ

> 2026ರ ಮುಂಗಾರು ಮಳೆಯ ಕೊರತೆಯಿಂದ ಕರ್ನಾಟಕದ ಪ್ರಮುಖ ಜಲಾಶಯಗಳಲ್ಲಿ ನಿರೀಕ್ಷಿತ ಮಟ್ಟದ ನೀರು ಸಂಗ್ರಹವಾಗದ ಸಂದರ್ಭದಲ್ಲಿ, ಕಾವೇರಿ ಜಲ ನಿಯಂತ್ರಣ ಸಮಿತಿ ಕರ್ನಾಟಕ ಪ್ರತಿದಿನ 3500 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಬಿಡುಗಡೆ ಮಾಡಬೇಕೆಂದು ನಿರ್ದೇಶಿಸಿದೆ. ಈ ನಿರ್ಧಾರ ರೈತರಲ್ಲಿ ಆತಂಕವನ್ನೂ, ಸಾರ್ವಜನಿಕರಲ್ಲಿ ಪ್ರಶ್ನೆಗಳನ್ನೂ ಹುಟ್ಟು ಹಾಕಿದೆ.




ಜಲತರಂಗ ನದಿಗಳು ರಾಜ್ಯಗಳ ಗಡಿಗಳನ್ನು ಗುರುತಿಸುವುದಿಲ್ಲ; ಅವು ಜೀವವನ್ನು ಮಾತ್ರ ಸಾಗಿಸುತ್ತವೆ. ಆದ್ದರಿಂದ ನದಿನೀರಿನ ಹಂಚಿಕೆಯೂ ಸಂಘರ್ಷದಿಂದಲ್ಲ, ವಿಜ್ಞಾನ, ನ್ಯಾಯ ಮತ್ತು ಸಹಕಾರದಿಂದ ನಡೆಯಬೇಕು. ಕಾವೇರಿ ನದಿ ಕರ್ನಾಟಕ ಮತ್ತು ತಮಿಳುನಾಡಿನ ಕೋಟ್ಯಂತರ ಜನರ ಜೀವನಾಡಿ. ಕುಡಿಯುವ ನೀರು, ಕೃಷಿ, ಕೈಗಾರಿಕೆ, ಪರಿಸರ ಸಂರಕ್ಷಣೆ, ಮೀನುಗಾರಿಕೆ ಹಾಗೂ ವಿದ್ಯುತ್ ಉತ್ಪಾದನೆ-ಇವೆಲ್ಲವೂ ಕಾವೇರಿ ಜಲವ್ಯವಸ್ಥೆಯ ಮೇಲೆ ಅವಲಂಬಿತವಾಗಿವೆ. ಆದ್ದರಿಂದ ಕಾವೇರಿ ವಿವಾದವನ್ನು ಕೇವಲ ಎರಡು ರಾಜ್ಯಗಳ ನಡುವಿನ ರಾಜಕೀಯ ಅಥವಾ ಭಾವನಾತ್ಮಕ ಸಂಘರ್ಷವೆಂದು ನೋಡುವುದು ವಾಸ್ತವಿಕತೆಯನ್ನು ಸರಳೀಕರಿಸುವ ಪ್ರಯತ್ನವಾಗುತ್ತದೆ.

2026ರ ಮುಂಗಾರು ಮಳೆಯ ಕೊರತೆಯಿಂದ ಕರ್ನಾಟಕದ ಪ್ರಮುಖ ಜಲಾಶಯಗಳಲ್ಲಿ ನಿರೀಕ್ಷಿತ ಮಟ್ಟದ ನೀರು ಸಂಗ್ರಹವಾಗದ ಸಂದರ್ಭದಲ್ಲಿ, ಕಾವೇರಿ ಜಲ ನಿಯಂತ್ರಣ ಸಮಿತಿ ಕರ್ನಾಟಕ ಪ್ರತಿದಿನ 3500 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಬಿಡುಗಡೆ ಮಾಡಬೇಕೆಂದು ನಿರ್ದೇಶಿಸಿದೆ. ಈ ನಿರ್ಧಾರ ರೈತರಲ್ಲಿ ಆತಂಕವನ್ನೂ, ಸಾರ್ವಜನಿಕರಲ್ಲಿ ಪ್ರಶ್ನೆಗಳನ್ನೂ ಹುಟ್ಟು ಹಾಕಿದೆ.

ಈ ಲೇಖನದ ಉದ್ದೇಶ ಯಾವುದೇ ಕಾನೂನುಬದ್ಧ ಸಂಸ್ಥೆಯ ಅಧಿಕಾರವನ್ನು ಪ್ರಶ್ನಿಸುವುದಲ್ಲ. ಬದಲಾಗಿ, ಪಾರದರ್ಶಕತೆ, ವೈಜ್ಞಾನಿಕ ಜಲಾಡಳಿತ ಮತ್ತು ದೀರ್ಘಕಾಲಿಕ ಶಾಶ್ವತ ಪರಿಹಾರದ ಅಗತ್ಯವನ್ನು ಚರ್ಚಿಸುವುದಾಗಿದೆ.

**ಜಲಾಶಯದ ನೀರೆಲ್ಲ ಬಳಕೆಗಿಲ್ಲ**

ಜಲಾಶಯದಲ್ಲಿ ಇಷ್ಟು ಟಿಎಂಸಿ ನೀರಿದೆ ಎಂಬ ಹೇಳಿಕೆಗಳು ಸಾಮಾನ್ಯ. ಆದರೆ ಜಲಶಾಸ್ತ್ರದ ದೃಷ್ಟಿಯಿಂದ ಇದು ಸಂಪೂರ್ಣ ಚಿತ್ರವಲ್ಲ. ಪ್ರತಿಯೊಂದು ಜಲಾಶಯದಲ್ಲೂ ಮೂರು ಪ್ರಮುಖ ಸಂಗ್ರಹ ಮಟ್ಟಗಳಿವೆ: ಒಟ್ಟು ಸಂಗ್ರಹ ಸಾಮರ್ಥ್ಯ, ಜೀವಂತ ಸಂಗ್ರಹ, ಡೆಡ್ ಸ್ಟೋರೇಜ್.

ಜಲಾಶಯ ಸಂಪೂರ್ಣವಾಗಿ ತುಂಬಿದಾಗ ಅದರಲ್ಲಿ ಸಂಗ್ರಹಿಸಬಹುದಾದ ಒಟ್ಟು ನೀರಿನ ಪ್ರಮಾಣವನ್ನು ಒಟ್ಟು ಸಂಗ್ರಹ ಸಾಮರ್ಥ್ಯ ಎಂದು ಕರೆಯಲಾಗುತ್ತದೆ. ಇದರಲ್ಲಿ ಬಳಕೆಗೆ ಯೋಗ್ಯವಾದ ನೀರು ಹಾಗೂ ಕೆಳಭಾಗದಲ್ಲಿ ಉಳಿಯುವ ನೀರು ಎರಡೂ ಸೇರಿರುತ್ತವೆ. ಜಲಾಶಯದಿಂದ ಗೇಟ್‌ಗಳು, ಕಾಲುವೆಗಳು ಅಥವಾ ಪೈಪ್‌ಗಳ ಮೂಲಕ ಕುಡಿಯುವ ನೀರು, ನೀರಾವರಿ, ವಿದ್ಯುತ್ ಉತ್ಪಾದನೆ ಹಾಗೂ ಇತರ ಬಳಕೆಗಳಿಗೆ ಹೊರಹರಿಸಬಹುದಾದ ನೀರಿನ ಪ್ರಮಾಣವನ್ನು ಜೀವಂತ ಸಂಗ್ರಹ ಎಂದು ಕರೆಯಲಾಗುತ್ತದೆ.

ಪ್ರಾಯೋಗಿಕವಾಗಿ ಜನರಿಗೆ ಉಪಯೋಗವಾಗುವ ನೀರು ಇದೇ. ಬಳಕೆಗೆ ಲಭ್ಯವಾಗುವುದು ಜೀವಂತ ಸಂಗ್ರಹ ಮಾತ್ರ. ಡೆಡ್ ಸ್ಟೋರೇಜ್‌ನಲ್ಲಿರುವ ನೀರನ್ನು ಗುರುತ್ವಾಕರ್ಷಣೆಯ ಮೂಲಕ ಸಂಪೂರ್ಣ ವಾಗಿ ಹೊರಹರಿಸಲು ಸಾಧ್ಯವಿಲ್ಲ. ಇದಕ್ಕಿಂತಲೂ ಪ್ರಮುಖವಾದ ಅಂಶವೆಂದರೆ ಹೂಳು ತುಂಬಿಕೆ. ಹಲವು ದಶಕಗಳಿಂದ ಜಲಾಶಯಗಳಲ್ಲಿ ಸೇರುತ್ತಿರುವ ಹೂಳು ಜೀವಂತ ಸಂಗ್ರಹ ಸಾಮರ್ಥ್ಯ ವನ್ನು ಕ್ರಮೇಣ ಕಡಿಮೆ ಮಾಡುತ್ತದೆ. ಹೀಗಾಗಿ ನಿರ್ಮಾಣದ ವೇಳೆಯಲ್ಲಿದ್ದ ಮೂಲ ಸಾಮರ್ಥ್ಯವೇ ಇಂದಿಗೂ ಲಭ್ಯವಿದೆ ಎಂದು ಪರಿಗಣಿಸುವುದು ವೈಜ್ಞಾನಿಕವಾಗಿ ಸರಿಯಲ್ಲ.



ಜಲಾಶಯದ ತಳಭಾಗದಲ್ಲಿ, ನೀರು ಬಿಡುವ ಕವಾಟಗಳ ಮಟ್ಟಕ್ಕಿಂತ ಕೆಳಗೆ ಉಳಿಯುವ ನೀರನ್ನು ಡೆಡ್ ಸ್ಟೋರೇಜ ಎಂದು ಕರೆಯಲಾಗುತ್ತದೆ. ಈ ನೀರನ್ನು ಗುರುತ್ವಾಕರ್ಷಣೆಯ ಮೂಲಕ ಹೊರ ಹರಿಸಲು ಸಾಧ್ಯವಿಲ್ಲ. ಇದು ಮುಖ್ಯವಾಗಿ ಹೂಳು ಸಂಗ್ರಹವಾಗಲು, ಪರಿಸರ ಸಮತೋಲನ ಕಾಪಾಡಲು ಮತ್ತು ಜಲಾಶಯದ ಕಾರ್ಯಾಚರಣೆಗೆ ಮೀಸಲು.

**ಎರಡು ರಾಜ್ಯಗಳ ಸವಾಲು**

ಕರ್ನಾಟಕದ ಪ್ರಮುಖ ಕಾವೇರಿ ಜಲಾಶಯಗಳ ಮೂಲ ಸಾಮರ್ಥ್ಯ ಹೀಗಿದೆ: ಕೃಷ್ಣರಾಜಸಾಗರ- ಸುಮಾರು 49.45 ಟಿಎಂಸಿ, ಡೆಡ್ ಸ್ಟೋರೇಜ್ 4.45 ಟಿಎಂಸಿ. ಹೇಮಾವತಿ (ಗೊರೂರು)- ಸುಮಾರು 37.00 ಟಿಎಂಸಿ, ಡೆಡ್ ಸ್ಟೋರೇಜ್ 5.84 ಟಿಎಂಸಿ. ಕಬಿನಿ- ಸುಮಾರು 19.52 ಟಿಎಂಸಿ, ಡೆಡ್ ಸ್ಟೋರೇಜ್ 3.51ಟಿಎಂಸಿ. ಹಾರಂಗಿ- ಸುಮಾರು 8.50 ಟಿಎಂಸಿ ಡೆಡ್ ಸ್ಟೋರೇಜ್ 0.56 ಟಿಎಂಸಿ.

ನಾಲ್ಕು ಪ್ರಮುಖ ಜಲಾಶಯಗಳ ಒಟ್ಟು ವಿನ್ಯಾಸ ಸಂಗ್ರಹ ಸಾಮರ್ಥ್ಯ ಸುಮಾರು 114.57 ಟಿಎಂಸಿ. ಅವುಗಳ ಡೆಡ್ ಸ್ಟೋರೇಜ್ ಒಟ್ಟಾರೆ ಸುಮಾರು 14.36 ಟಿಎಂಸಿ. ಆದಾಗ್ಯೂ, ಈ ಸಂಪೂರ್ಣ ಸಂಗ್ರಹಿತ ನೀರು ಬಳಕೆಗೆ ಲಭ್ಯವಿಲ್ಲ. ಜಲಾಶಯಗಳಲ್ಲಿ ವರ್ಷಗಳಿಂದ ಸಂಗ್ರಹವಾಗಿರುವ ಹೂಳು, ಡೆಡ್ ಸ್ಟೋರೇಜ್, ಕುಡಿಯುವ ನೀರಿಗಾಗಿ ಕಡ್ಡಾಯವಾಗಿ ಕಾಯ್ದಿರಿಸಬೇಕಾದ ಸಂಗ್ರಹ ಹಾಗೂ ಪರಿಸರ ಸಮತೋಲನಕ್ಕಾಗಿ ಅಗತ್ಯವಾದ ಹರಿವುಗಳನ್ನು ಪರಿಗಣಿಸಿದ ನಂತರವೇ ವಾಸ್ತವವಾಗಿ ಬಳಕೆಗೆ ಲಭ್ಯವಿರುವ ಜೀವಂತ ಸಂಗ್ರಹ ಎಷ್ಟು ಎಂಬುದನ್ನು ವೈಜ್ಞಾನಿಕವಾಗಿ ನಿರ್ಧರಿಸಬಹುದು.

ಇದೇ ವಾಸ್ತವಿಕತೆ ತಮಿಳುನಾಡಿನ ಮೆಟ್ಟೂರು ಜಲಾಶಯಕ್ಕೂ ಅನ್ವಯಿಸುತ್ತದೆ. ಈ ಜಲಾಶಯದ ಒಟ್ಟು ವಿನ್ಯಾಸ ಸಂಗ್ರಹ ಸಾಮರ್ಥ್ಯ ಸುಮಾರು 93.47 ಟಿಎಂಸಿ, ಡೆಡ್ ಸ್ಟೋರೇಜ್ ಸುಮಾರು 20 ಟಿಎಂಸಿ ಇದೆ. ಹೀಗಾಗಿ ಇದರ ಸಂಪೂರ್ಣ ಸಂಗ್ರಹ ಸಾಮರ್ಥ್ಯವೂ ಬಳಕೆಗೆ ಲಭ್ಯವಿರುವ ನೀರಲ್ಲ. ಅಲ್ಲಿಯೂ ಹಲವು ದಶಕಗಳಿಂದ ಸಂಗ್ರಹವಾಗಿರುವ ಹೂಳು, ಜೀವಂತ ಸಂಗ್ರಹ ಸಾಮರ್ಥ್ಯದ ಇಳಿಕೆ, ಕಾವೇರಿ ಡೆಲ್ಟಾದ ನೀರಾವರಿ ಅವಶ್ಯಕತೆಗಳು ಹಾಗೂ ಕುಡಿಯುವ ನೀರಿನ ಮೀಸಲುಗಳನ್ನು ಪರಿಗಣಿಸಿದ ನಂತರವೇ ವಾಸ್ತವವಾಗಿ ಲಭ್ಯವಿರುವ ನೀರಿನ ಪ್ರಮಾಣ ನಿರ್ಧರಿಸಬಹುದು. ಆದ್ದರಿಂದ ಇದು ಕಾವೇರಿ ಜಲಾನಯನ ಪ್ರದೇಶವನ್ನು ಹಂಚಿಕೊಂಡಿರುವ ಎರಡೂ ರಾಜ್ಯಗಳು ಎದುರಿಸುತ್ತಿರುವ ಸಾಮಾನ್ಯ ಜಲಸಂಪನ್ಮೂಲ ನಿರ್ವಹಣೆಯ ಸವಾಲು.

**ಪುನರುಜ್ಜೀವನಕ್ಕೆ ಮೊದಲ ಆದ್ಯತೆ**

ಮಂಡ್ಯ ಜಿಲ್ಲಾ ಹಿತರಕ್ಷಣಾ ಸಮಿತಿಯ ಅಧ್ಯಕ್ಷರಾದ ಕೆ. ಬೋರಯ್ಯ ಹಾಗೂ ಪ್ರಧಾನ ಕಾರ್ಯದರ್ಶಿ ಸುನಂದಾ ಜಯರಾಮ್ ಅವರು ಹಲವು ವರ್ಷಗಳಿಂದ ದೂರದೃಷ್ಟಿಯ ಒಂದು ಮಹತ್ವದ ಸಲಹೆಯನ್ನು ಮುಂದಿಟ್ಟಿದ್ದಾರೆ. ಅವರ ಅಭಿಪ್ರಾಯವೆಂದರೆ, ಕಾವೇರಿ ಜಲಾನಯನ ಪ್ರದೇಶದಲ್ಲಿ ಹೊಸ ಜಲಾಶಯಗಳು ಅಥವಾ ಹೊಸ ಜಲಸಂಗ್ರಹ ಯೋಜನೆಗಳನ್ನು ನಿರ್ಮಿಸುವ ಬಗ್ಗೆ ಯೋಚಿಸುವ ಮೊದಲು, ಇರುವ ಜಲಸಂಗ್ರಹ ಮೂಲಸೌಕರ್ಯವನ್ನು ಅದರ ಮೂಲ ಸಾಮರ್ಥ್ಯ ಕ್ಕೆ ಸಾಧ್ಯವಾದಷ್ಟು ಮರುಸ್ಥಾಪಿಸಬೇಕು. ಈ ದೃಷ್ಟಿಕೋನವು ಆಧುನಿಕ ಜಲಸಂಪನ್ಮೂಲ ನಿರ್ವಹಣೆಯ ಮೂಲಭೂತ ತತ್ವಗಳಿಗೂ ಸಂಪೂರ್ಣವಾಗಿ ಹೊಂದಿಕೆಯಾಗುತ್ತದೆ.

ಕರ್ನಾಟಕದ ಪ್ರಮುಖ ನಾಲ್ಕು ಜಲಾಶಯಗಳಾದ ಕೃಷ್ಣರಾಜಸಾಗರ (49.45 ಟಿಎಂಸಿ), ಹೇಮಾವತಿ (37.10 ಟಿಎಂಸಿ), ಕಬಿನಿ (19.52 ಟಿಎಂಸಿ) ಹಾಗೂ ಹಾರಂಗಿ (8.50 ಟಿಎಂಸಿ) ಸೇರಿ ಒಟ್ಟು 114.57 ಟಿಎಂಸಿ ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿವೆ. ತಮಿಳುನಾಡಿನ ಮೆಟ್ಟೂರು (ಸ್ಟಾನ್ಲಿ) ಜಲಾಶಯದ ಮೂಲ ವಿನ್ಯಾಸ ಸಾಮರ್ಥ್ಯ 93.47 ಟಿಎಂಸಿ. ಈ ಎರಡೂ ರಾಜ್ಯಗಳ ಪ್ರಮುಖ ಜಲಾಶಯಗಳ ಒಟ್ಟು ವಿನ್ಯಾಸ ಸಾಮರ್ಥ್ಯ ಸುಮಾರು 208 ಟಿಎಂಸಿ.

ಆದರೆ ಈ ಸಾಮರ್ಥ್ಯ ಇಂದು ಸಂಪೂರ್ಣವಾಗಿ ಲಭ್ಯವಿದೆ ಎಂದು ಹೇಳಲು ಸಾಧ್ಯವಿಲ್ಲ. ಹಲವು ದಶಕಗಳಿಂದ ಹರಿದು ಬಂದ ಹೂಳು ಜಲಾಶಯಗಳ ತಳಭಾಗದಲ್ಲಿ ಸಂಗ್ರಹವಾಗುತ್ತಾ ಬಂದಿರುವುದರಿಂದ ಜೀವಂತ ಸಂಗ್ರಹ ಸಾಮರ್ಥ್ಯ ನಿರಂತರವಾಗಿ ಕಡಿಮೆಯಾಗುತ್ತಿದೆ. ಕೇಂದ್ರ ಜಲ ಆಯೋಗ ಹಾಗೂ ವಿವಿಧ ಜಲವಿಜ್ಞಾನ ಅಧ್ಯಯನಗಳು ದೇಶದ ಅನೇಕ ಹಳೆಯ ಜಲಾಶಯಗಳಲ್ಲಿ ಮೂಲ ಸಂಗ್ರಹ ಸಾಮರ್ಥ್ಯದ 10 ರಿಂದ 30 ಶೇಕಡಾ ಹೂಳು ತುಂಬಿರುವುದನ್ನು ದಾಖಲಿಸಿವೆ.

ಈ ನೈಜ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಜಲಾಶಯಗಳ ತಳಭಾಗದ ಆಳಮಾಪನ ಸಮೀಕ್ಷೆ ಅತ್ಯಗತ್ಯ. ಸೋನಾರ್, ಜಿಪಿಎಸ್ ಹಾಗೂ ಇತರ ಆಧುನಿಕ ತಂತ್ರಜ್ಞಾನಗಳ ಮೂಲಕ ನಡೆಸುವ ಈ ಸಮೀಕ್ಷೆಯು ಜಲಾಶಯದ ತಳಭಾಗದ ಆಕೃತಿ, ಹೂಳು ಸಂಗ್ರಹದ ಪ್ರಮಾಣ ಹಾಗೂ ಉಳಿದಿರುವ ನೈಜ ಜೀವಂತ ಸಂಗ್ರಹ ಸಾಮರ್ಥ್ಯವನ್ನು ನಿಖರವಾಗಿ ನಿರ್ಧರಿಸುತ್ತದೆ. ದುರದೃಷ್ಟವಶಾತ್, ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಿಗೆ ಸಂಬಂಧಿಸಿದ ಇತ್ತೀಚಿನ ಸಮಗ್ರ ಸಮೀಕ್ಷಾ ವರದಿಗಳು ಸಾರ್ವಜನಿಕವಾಗಿ ಲಭ್ಯವಿಲ್ಲ.

ಕಾವೇರಿ ಜಲಭದ್ರತೆ ಕೇವಲ ಪ್ರಮುಖ ಜಲಾಶಯಗಳ ಮೇಲೆ ಮಾತ್ರ ಅವಲಂಬಿತವಾಗಿಲ್ಲ. ಕೊಡಗಿನ ಮೇಲ್ಕಾವೇರಿ ಪ್ರದೇಶದ ಕೆರೆಗಳು ಮತ್ತು ಅಣೆಕಟ್ಟುಗಳು, ಮಂಡ್ಯದ ಕಾಲುವೆ ವ್ಯಾಪ್ತಿಯ ಟ್ಯಾಂಕ್ ಸರಪಳಿಗಳು, ಮೈಸೂರು, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಗಳ ಸಣ್ಣ ನೀರಾವರಿ ಕೆರೆಗಳು, ವಿವಿಧ ಉಪನದಿಗಳ ಮೇಲಿನ ನೂರಾರು ಚೆಕ್‌ಡ್ಯಾಂಗಳು ಸ್ಥಳೀಯ ಜಲಸಂಗ್ರಹ ಹಾಗೂ ಅಂತರ್ಜಲ ಪುನರ್ಭರ್ತಿಗೆ ಮಹತ್ವದ ಕೊಡುಗೆ ನೀಡುತ್ತಿವೆ. ಅದೇ ರೀತಿ ತಮಿಳುನಾಡಿನ ಮೆಟ್ಟೂರು, ಮುಕ್ಕೊಂಬು, ಐತಿಹಾಸಿಕ ಕಲ್ಲಣೈ, ಭವಾನಿಸಾಗರ, ಅಮರಾವತಿ ಹಾಗೂ ಕಾವೇರಿ ಡೆಲ್ಟಾದ ಸಾವಿರಾರು ಸಾಂಪ್ರದಾಯಿಕ ಏರಿ ವ್ಯವಸ್ಥೆಗಳೂ ಸಮಾನ ಪ್ರಾಮುಖ್ಯ ಹೊಂದಿವೆ.




ಸರಕಾರಿ ಅಂದಾಜುಗಳ ಪ್ರಕಾರ ಕರ್ನಾಟಕದ ಸಣ್ಣ ಜಲಸಂಗ್ರಹ ವ್ಯವಸ್ಥೆಗಳು ಸುಮಾರು 10-15 ಟಿಎಂಸಿ, ತಮಿಳುನಾಡಿನ ಏರಿ ಮತ್ತು ಟ್ಯಾಂಕ್ ವ್ಯವಸ್ಥೆಗಳು 40-55 ಟಿಎಂಸಿ ನೀರನ್ನು ಸಂಗ್ರಹಿಸ ಬಲ್ಲವು. ಅಂದರೆ ಎರಡೂ ರಾಜ್ಯಗಳ ಸಣ್ಣ ಜಲಸಂಗ್ರಹ ಮೂಲಸೌಕರ್ಯಗಳು ಸೇರಿ 50-70 ಟಿಎಂಸಿ ಹೆಚ್ಚುವರಿ ಸಂಗ್ರಹ ಸಾಮರ್ಥ್ಯ ಹೊಂದಿವೆ. ಹೀಗಾಗಿ ಪ್ರಮುಖ ಜಲಾಶಯಗಳು ಮತ್ತು ಸಣ್ಣ ಜಲಸಂಗ್ರಹ ವ್ಯವಸ್ಥೆಗಳನ್ನು ಸೇರಿಸಿದರೆ, ಕಾವೇರಿ ಜಲಾನಯನ ಪ್ರದೇಶದಲ್ಲಿ ಈಗಾಗಲೇ 250 ಟಿಎಂಸಿಗೂ ಅಧಿಕ ಜಲಸಂಗ್ರಹ ಮೂಲಸೌಕರ್ಯ ಅಸ್ತಿತ್ವದಲ್ಲಿದೆ.

ವೈಜ್ಞಾನಿಕ ಹೂಳು ತೆಗೆಯುವಿಕೆ, ಜಲಾನಯನ ಪ್ರದೇಶ ಸಂರಕ್ಷಣೆ ಮತ್ತು ಮಣ್ಣಿನ ಕೊರೆತ ನಿಯಂತ್ರಣ ಕಾರ್ಯಕ್ರಮಗಳನ್ನು ಸಮನ್ವಯವಾಗಿ ಜಾರಿಗೊಳಿಸಿದರೆ, ಒಟ್ಟಾರೆ 10 ರಿಂದ 20 ಟಿಎಂಸಿ ಹೆಚ್ಚುವರಿ ಜೀವಂತ ಸಂಗ್ರಹ ಸಾಮರ್ಥ್ಯವನ್ನು ಮರುಪಡೆಯುವ ಸಾಧ್ಯತೆ ಇದೆ ಎಂದು ಜಲಸಂಪನ್ಮೂಲ ತಜ್ಞರು ಅಂದಾಜಿಸಿದ್ದಾರೆ. ಸಾಮಾನ್ಯ ವರ್ಷಗಳಲ್ಲಿ ಈ ಪ್ರಮಾಣ ಅಲ್ಪವೆನಿಸಬಹುದು; ಆದರೆ ಬರಗಾಲದಲ್ಲಿ ಇದೇ ನೀರು ಲಕ್ಷಾಂತರ ರೈತರ ಬೆಳೆ ಉಳಿಸುವುದಕ್ಕೂ, ಕೋಟ್ಯಂತರ ಜನರ ಕುಡಿಯುವ ನೀರಿನ ಭದ್ರತೆಯನ್ನು ಕಾಪಾಡುವುದಕ್ಕೂ ಮತ್ತು ಪರಿಸರ ಹರಿವುಗಳನ್ನು ನಿರ್ವಹಿಸುವುದಕ್ಕೂ ಅತ್ಯಂತ ಮಹತ್ವದ ಯುಕ್ತಿಯುತ ಜಲ ಮೀಸಲು ಆಗಬಹುದು.

**ಹೂಳು ತೆಗೆಯುವಿಕೆ ಕಾರ್ಯಕ್ರಮ**

ಈ ಹಿನ್ನೆಲೆಯಲ್ಲಿ ಭಾರತ, ಕರ್ನಾಟಕ, ತಮಿಳುನಾಡು ಸರಕಾರಗಳು ಹಾಗೂ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಜಂಟಿಯಾಗಿ ರಾಷ್ಟ್ರೀಯ ಕಾವೇರಿ ಜಲಸಂಗ್ರಹ ಪುನರುಜ್ಜೀವನ ಮತ್ತು ಹೂಳು ತೆಗೆಯುವಿಕೆ ಕಾರ್ಯಕ್ರಮ ಆರಂಭಿಸುವುದು ಸಮಯೋಚಿತ.




ಈ ರೀತಿಯಾಗಿ ಈಗಿರುವ ಜಲಸಂಗ್ರಹ ಮೂಲಸೌಕರ್ಯವನ್ನು ವೈಜ್ಞಾನಿಕವಾಗಿ ಪುನರುಜ್ಜೀವನ ಗೊಳಿಸಿ ಅದರ ಮೂಲ ಸಾಮರ್ಥ್ಯವನ್ನು ಸಾಧ್ಯವಾದಷ್ಟು ಮರುಸ್ಥಾಪಿಸಲು ಸಾಧ್ಯವಾದರೆ, ಗಮನಾರ್ಹ ಪ್ರಮಾಣದ ಹೆಚ್ಚುವರಿ ನೀರನ್ನು ಸಂಗ್ರಹಿಸುವುದರ ಜೊತೆಗೆ ಹೊಸ ಜಲಾಶಯಗಳ ನಿರ್ಮಾಣದ ಅಗತ್ಯ, ಅವುಗಳ ಆರ್ಥಿಕ ನ್ಯಾಯಸಮ್ಮತತೆ, ಪರಿಸರ ಪರಿಣಾಮ ಮತ್ತು ಸಾಮಾಜಿಕ ವೆಚ್ಚಗಳನ್ನು ಹೆಚ್ಚು ವಾಸ್ತವಿಕ ಹಾಗೂ ವೈಜ್ಞಾನಿಕವಾಗಿ ಮೌಲ್ಯಮಾಪನ ಮಾಡಲು ಸಾಧ್ಯವಾಗುತ್ತದೆ. ಇದರಿಂದ ಸಾರ್ವಜನಿಕ ಹಣದ ಸಮರ್ಥ ಬಳಕೆ, ಪರಿಸರ ಸಂರಕ್ಷಣೆ ಮತ್ತು ಅಂತಾ ರಾಜ್ಯ ಜಲಸಂಪನ್ಮೂಲಗಳ ನ್ಯಾಯಯುತ ನಿರ್ವಹಣೆ- ಈ ಮೂರು ಉದ್ದೇಶಗಳೂ ಏಕಕಾಲದಲ್ಲಿ ಸಾಧಿಸಬಹುದು.

ಆದ್ದರಿಂದ ಮೊದಲು ಪುನರುಜ್ಜೀವನ, ನಂತರವೇ ಹೊಸ ಸಂಗ್ರಹ ಎಂಬ ತತ್ವ ಕೇವಲ ತಾಂತ್ರಿಕ ಶಿಫಾರಸ್ಸಲ್ಲ; ಭಾರತದ ಭವಿಷ್ಯದ ಜಲಸಂಪನ್ಮೂಲ ಯೋಜನೆಗಳಿಗೆ ಮಾರ್ಗದರ್ಶಕ ರಾಷ್ಟ್ರೀಯ ನೀತಿಯಾಗಬೇಕು. ಕಾವೇರಿ ಕಣಿವೆಯಲ್ಲಿ ಈ ತತ್ವವನ್ನು ಯಶಸ್ವಿಯಾಗಿ ಜಾರಿಗೊಳಿಸಲು ಸಾಧ್ಯವಾದರೆ, ಅದು ದೇಶದ ಇತರ ಅಂತಾರಾಜ್ಯ ನದಿ ಜಲಾನಯನ ಪ್ರದೇಶಗಳಿಗೂ ಅನುಕರಣೀಯ ಮಾದರಿಯಾಗಬಹುದು.

**ಮೊದಲು ಕುಡಿಯುವ ನೀರು**

ಭಾರತದ ರಾಷ್ಟ್ರೀಯ ಜಲ ನೀತಿ ಹಾಗೂ ವಿವಿಧ ನ್ಯಾಯಾಂಗ ತೀರ್ಪುಗಳು ಸ್ಪಷ್ಟವಾಗಿ ಹೇಳುವ ಮೂಲ ತತ್ವವೆಂದರೆ ಮಾನವ ಜೀವ ರಕ್ಷಣೆಗೆ ಅಗತ್ಯವಾದ ಕುಡಿಯುವ ನೀರಿಗೆ ಮೊದಲ ಆದ್ಯತೆ. ಅದಾದ ನಂತರವೇ: ಕೃಷಿ, ಕೈಗಾರಿಕೆ, ವಿದ್ಯುತ್ ಉತ್ಪಾದನೆ ಹಾಗೂ ಇತರ ಬಳಕೆಗಳು.

ಹೀಗಾಗಿ ಬೆಂಗಳೂರು, ಮೈಸೂರು, ಮಂಡ್ಯ ಸೇರಿದಂತೆ ಕರ್ನಾಟಕದ ನಗರಗಳು ಹಾಗೂ ಗ್ರಾಮಗಳ ಕುಡಿಯುವ ನೀರಿನ ಭದ್ರತೆಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಇದೇ ರೀತಿ ತಮಿಳುನಾಡಿನ ಜನರ ಕುಡಿಯುವ ನೀರಿನ ಅಗತ್ಯವೂ ಸಮಾನ ಗೌರವಕ್ಕೆ ಪಾತ್ರವಾಗಿದೆ. ಆದ್ದರಿಂದ ಕಾವೇರಿ ಪ್ರಶ್ನೆಯನ್ನು ಕರ್ನಾಟಕ ವಿರುದ್ಧ ತಮಿಳುನಾಡು ಎಂಬ ದೃಷ್ಟಿಯಿಂದ ಅಲ್ಲ, ಮಾನವ ಜೀವನ, ಸಂವಿಧಾನಾತ್ಮಕ ಆದ್ಯತೆ ಮತ್ತು ನ್ಯಾಯಸಮ್ಮತ ಜಲ ನಿರ್ವಹಣೆ ಎಂಬ ದೃಷ್ಟಿಯಿಂದ ನೋಡಬೇಕು.

ಕರ್ನಾಟಕದ ಮಂಡ್ಯ ರೈತ ಮಳೆಯ ಕೊರತೆಯಿಂದ ಸಂಕಷ್ಟದಲ್ಲಿದ್ದಾನೆ. ತಮಿಳುನಾಡಿನ ಕಾವೇರಿ ಡೆಲ್ಟಾದ ರೈತನೂ ಅದೇ ಅನಿಶ್ಚಿತತೆಯನ್ನು ಎದುರಿಸುತ್ತಿದ್ದಾನೆ. ಭಾಷೆ ಬೇರೆ. ರಾಜ್ಯ ಬೇರೆ. ಆದರೆ ರೈತನ ಕಣ್ಣೀರಿಗೆ ಭಾಷೆಯಿಲ್ಲ. ಆದ್ದರಿಂದ ರೈತರನ್ನು ಪರಸ್ಪರ ಎದುರಾಳಿಗಳಂತೆ ಚಿತ್ರಿಸುವ ರಾಜಕೀಯವು ಸಮಸ್ಯೆಯನ್ನು ಪರಿಹರಿಸುವುದಿಲ್ಲ.

**- ಕೆ.ವಿ ಚಂದ್ರಮೌಳಿ**

## ಈ ಕಾರ್ಯಕ್ರಮದ ಪ್ರಮುಖ ಅಂಶಗಳು:

- ಕಾವೇರಿ ಜಲಾನಯನ ಪ್ರದೇಶದ ಎಲ್ಲಾ ಪ್ರಮುಖ ಜಲಾಶಯಗಳು, ಬ್ಯಾರೇಜುಗಳು, ಅಣೆಕಟ್ಟುಗಳು, ನೀರಾವರಿ ಕೆರೆಗಳು, ಚೆಕ್‌ಡ್ಯಾಂಗಳು ಹಾಗೂ ಏರಿ ವ್ಯವಸ್ಥೆಗಳ ಸಮಗ್ರ ತಳಭಾಗದ ಆಳಮಾಪನ ಸಮೀಕ್ಷೆ ನಡೆಸುವುದು.
- ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳ ಸಂಗ್ರಹ ಸಾಮರ್ಥ್ಯ ಮತ್ತು ಹೂಳು ಸಂಗ್ರಹಣೆಯ ಸಮಗ್ರ ಅಟ್ಲಸ್ ಸಿದ್ಧಪಡಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಪ್ರಕಟಿಸುವುದು.
- ಪ್ರತಿಯೊಂದು ಜಲಸಂಗ್ರಹ ವ್ಯವಸ್ಥೆಗೆ ಮೂಲ ವಿನ್ಯಾಸ ಸಾಮರ್ಥ್ಯ, ಪ್ರಸ್ತುತ ಜೀವಂತ ಸಂಗ್ರಹ, ಡೆಡ್ ಸ್ಟೋರೇಜ್, ಹೂಳು ಸಂಗ್ರಹಣೆಯ ಪ್ರಮಾಣ, ವಾರ್ಷಿಕ ಸಾಮರ್ಥ್ಯ ಕುಸಿತ, ಮರುಪಡೆಯಬಹುದಾದ ಜೀವಂತ ಸಂಗ್ರಹ ಹಾಗೂ ವೆಚ್ಚ-ಲಾಭ ವಿಶ್ಲೇಷಣೆಯನ್ನು ಪ್ರಕಟಿಸುವುದು.
- ವೆಚ್ಚ-ಲಾಭ ಅನುಪಾತ ಅತ್ಯಧಿಕವಾಗಿರುವ ಜಲಾಶಯಗಳು, ಕೆರೆಗಳು ಮತ್ತು ಏರಿ ವ್ಯವಸ್ಥೆಗಳಿಗೆ ಆದ್ಯತೆ ನೀಡಿ ವೈಜ್ಞಾನಿಕ ಹೂಳು ತೆಗೆಯುವಿಕೆ ಕೈಗೊಳ್ಳುವುದು.
- ಜಲಾನಯನ ಪ್ರದೇಶ ಸಂರಕ್ಷಣೆ ಮತ್ತು ಪುನಶ್ಚೇತನ ಕಾರ್ಯಕ್ರಮ, ಮಣ್ಣಿನ ಕೊರೆತ ನಿಯಂತ್ರಣ, ವೃಕ್ಷಾರೋಪಣ ಹಾಗೂ ಮಳೆ ನೀರು ಸಂರಕ್ಷಣೆ ಮೂಲಕ ಭವಿಷ್ಯದ ಹೂಳು ಸಂಗ್ರಹಣೆಯನ್ನು ಕಡಿಮೆ ಮಾಡುವುದು.
- ಪ್ರಮುಖ ಜಲಾಶಯಗಳಲ್ಲಿ ಕನಿಷ್ಠ ಐದು ವರ್ಷಗಳಿಗೊಮ್ಮೆ ಮರು ಸಮೀಕ್ಷೆ ನಡೆಸಿ ಸಂಗ್ರಹ ಸಾಮರ್ಥ್ಯದಲಾಗುವ ಬದಲಾವಣೆಗಳನ್ನು ದಾಖಲಿಸಿ ಸಾರ್ವಜನಿಕರಿಗೆ ಪ್ರಕಟಿಸುವುದು.

## ಜಾನುವಾರುಗಳಿಗೆ ರೋಗದ ಜೋಳ ತಿನ್ನಿಸದಿರಲು ಮನವಿ



**ಹಾಸನ:** ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಬಿತ್ತನೆಯಾಗಿರುವ ಮುಸುಕಿನ ಜೋಳದ ಬೆಳೆಯಲ್ಲಿ ಬಿಳಿಸುಳಿರೋಗ (ಕೇದಿಗೆ ರೋಗ ಅಥವಾ ಬೂಜುರೋಗ) ಬಾದೆ ಕಂಡುಬಂದಿದ್ದು, ರೋಗಬಾಧಿತ ಮುಸುಕಿನ ಜೋಳದ ಮೇವನ್ನು ಜಾನುವಾರುಗಳಿಗೆ ತಿನ್ನಿಸದಂತೆ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಬಿ.ಕೆ.ರಮೇಶ್ ಅವರು ರೈತ ಬಾಂಧವರಲ್ಲಿ ಮನವಿ ಮಾಡಿದ್ದಾರೆ.

ಬಿಳಿಸುಳಿ ರೋಗಕ್ಕೆ ಶಿಲೀಂದ್ರ ರೋಗಾಣುವು ಕಾರಣವಾಗಿದ್ದು, ರೋಗಬಾಧಿತ ಮುಸುಕಿನ ಜೋಳದ ಮೇವನ್ನು ಜಾನುವಾರುಗಳಿಗೆ ತಿನ್ನಲು ನೀಡಿದಲ್ಲಿ ಅವುಗಳ ಆರೋಗ್ಯದ ಮೇಲೆ ದುಷ್ಪರಿಣಾಮವಾಗುವ ಸಂಭವವಿರುತ್ತದೆ. ಅಲ್ಲದೆ ರೋಗಬಾಧಿತ ಮುಸುಕಿನ ಜೋಳದ ಬೆಳೆಗೆ ಶಿಲೀಂದ್ರನಾಶಕ/ ಕೀಟನಾಶಕ ಔಷಧಿಗಳನ್ನು ಸಿಂಪಡಣೆ ಮಾಡಿದಲ್ಲಿ, ಅದರಿಂದಲೂ ಸಹ ಜಾನುವಾರುಗಳಲ್ಲಿ ವಿಷಬಾಧೆ ಕಾಣಿಸಿಕೊಳ್ಳುತ್ತದೆ, ಆದ್ದರಿಂದ ರೋಗ ಬಾಧಿತ ಹಾಗೂ ಶಿಲೀಂದ್ರನಾಶಕ/ ಕೀಟನಾಶಕ ಸಿಂಪಡಿತ ವಿಷಯುಕ್ತ ಮುಸುಕಿನ ಜೋಳದ ಮೇವನ್ನು ಜಾನುವಾರುಗಳಿಗೆ ನೀಡದಂತೆ ರೈತರಲ್ಲಿ ಮನವಿ ಮಾಡಿದ್ದಾರೆ.

## ನಗರದಲ್ಲಿ ಆ.10ರಿಂದ 3 ದಿನಗಳ ನಾಟಕೋತ್ಸವ

• ಪ್ರಜೋದಯ ವರದಿ




**ಹಾಸನ:** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಾಸನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಾಸನ ಜಿಲ್ಲಾ ವಿವಿಧ ರಂಗಭೂಮಿ, ಸಾಮಾಜಿಕ ಮತ್ತು ಜಾನಪದ ಕಲಾ ಸಂಘಗಳ ಸಂಯುಕ್ತ ಆಶ್ರಯದಲ್ಲಿ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಗಸ್ಟ್ 10 ರಿಂದ 12 ರವರೆಗೆ ಮೂರು ದಿನಗಳ ನಾಟಕೋತ್ಸವ ಆಯೋಜಿಸಲಾಗಿದೆ.

ನಾಟಕೋತ್ಸವದ ಮೊದಲ ದಿನವಾದ ಆಗಸ್ಟ್ 10ರಂದು ಸಂಜೆ 6.45ಕ್ಕೆ ಹಾಸನದ ಸಂಸ್ಕೃತಿ ಟ್ರಸ್ಟ್ ವತಿಯಿಂದ ಕುವೆಂಪು ಅವರ ಅಮರ ಕೃತಿ ಸ್ಮಶಾನ ಕುರುಕ್ಷೇತ್ರ ಪ್ರದರ್ಶನ ಗೊಳ್ಳಲಿದೆ, ಆಗಸ್ಟ್ 11 ರಂದು ಸಂಜೆ 6.45ಕ್ಕೆ ಮೈಸೂರಿನ ನಾಟ್ಯಲೇಖ ರಂಗಸಮೂಹದಿಂದ ಘಾಟಿ ನಾಟಕ ಹಾಗೂ ಆಗಸ್ಟ್ 12ರಂದು ಸಂಜೆ 6.45ಕ್ಕೆ ಉಡುಪಿ ಜಿಲ್ಲೆಯ ಕೊಡವೂರಿನ ಸುಮನಸಾ ತಂಡದಿಂದ ಈದಿ ನಾಟಕ ಪ್ರದರ್ಶನವಾಗ ಲಿದೆ.

ಪ್ರತಿ ನಾಟಕವು ಸುಮಾರು ಒಂದರಿಂದ ಒಂದೂವರೆ ಗಂಟೆಗಳ ಅವಧಿಯದ್ದಾಗಿ ರುತ್ತದೆ, ನಾಟಕಗಳು ನಿಗದಿತ ಸಮಯಕ್ಕೆ ಆರಂಭವಾಗಲಿರುವುದರಿಂದ ರಂಗಾಸಕ್ತರು ಕನಿಷ್ಠ 15 ನಿಮಿಷಗಳ ಮುಂಚಿತವಾಗಿ ಆಗಮಿಸುವಂತೆ ಆಯೋಜಕರು ಮನವಿ ಮಾಡಿದ್ದಾರೆ.

ಕುಟುಂಬ ಸಮೇತರಾಗಿ ಹಾಗೂ ಸ್ನೇಹಿತರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಉತ್ತಮ ನಾಟಕಗಳನ್ನು ವೀಕ್ಷಿಸುವ ಮೂಲಕ ಕನ್ನಡ ರಂಗಭೂಮಿಗೆ ಪ್ರೋತ್ಸಾಹ ನೀಡುವಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶಗೌಡ ಅವರು ಸಾರ್ವಜನಿಕರಲ್ಲಿ ಕೋರಿದ್ದಾರೆ.

## ಸನ್ಮಾನಕ್ಕಾಗಿ ಸಾಧಕರಿಂದ ಅರ್ಜಿ ಆಹ್ವಾನ

**ಹಾಸನ:** ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರುಗಳಿಗೆ 2026 ನೇ ಆಗಸ್ಟ್ 15 ರಂದು ಜಿಲ್ಲಾಡಳಿತ ವತಿಯಿಂದ ಸನ್ಮಾನಿಸುವ ಬಗ್ಗೆ ತೀರ್ಮಾನಿಸಲಾಗಿರುತ್ತದೆ, ಸಾಧಕರು ಅಥವಾ ಸಾಧಕರ ಬಗ್ಗೆ ಮಾಹಿತಿ ಹೊಂದಿರುವ ವ್ಯಕ್ತಿಗಳು ಸಾಧಕರ ಮಾಹಿತಿಯನ್ನು ಕರಾರುವಕ್ಕಾದ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಅರ್ಜಿ ಸಲ್ಲಿಸುತ್ತಿರುವ ಕ್ಷೇತ್ರದ ಬಗ್ಗೆ ಸ್ಪಷ್ಟವಾಗಿ ನಮೂದಿಸಿ ಅಗತ್ಯ ದೃಢೀಕೃತ ದಾಖಲೆಗಳನ್ನು ಆ. 11 ರಂದು ಸಂಜೆ 4.30 ಗಂಟೆಯೊಳಗೆ ಸಹಾಯಕ ಆಯುಕ್ತರು ಹಾಸನ ಉಪ ವಿಭಾಗ ಹಾಸನ ಇವರ ಕಚೇರಿಗೆ ಸಲ್ಲಿಸಲು ಹಾಸನ ಉಪ ವಿಭಾಗ ಉಪವಿಭಾಗಾಧಿಕಾರಿ ತಿಳಿಸಿದ್ದಾರೆ.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳು, ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೆಪಿಎಸ್‌ಸಿ ನೇಮಕಾತಿ ಹಗರಣ: ನಿಷ್ಪಕ್ಷಪಾತ ತನಿಖೆಗೆ ಆಗ್ರಹ

### ಬದಲಾವಣೆ ಅನಿವಾರ್ಯ ಘೋಷಣೆಯೊಂದಿಗೆ ಸಿಪಿಐ ಪಾದಯಾತ್ರೆ




• ಪ್ರಜೋದಯ ವರದಿ

**ಸಕಲೇಶಪುರ:** ಭಾರತ ಕಮ್ಯೂನಿಸ್ಟ್ ಪಕ್ಷ ಹಮ್ಮಿಕೊಂಡಿರುವ ಬದಲಾವಣೆ ಅನಿವಾರ್ಯ ರಾಷ್ಟ್ರವ್ಯಾಪಿ ರಾಜಕೀಯ ಅಭಿಯಾನದ ಅಂಗವಾಗಿ ಶುಕ್ರವಾರ ಪಟ್ಟಣದ ಪ್ರಮುಖ ಬೀದಿಗಳು ಹಾಗೂ ಬಡಾವಣೆಗಳಲ್ಲಿ ಪಾದ ಯಾತ್ರೆ ನಡೆಸಿತು.

ಪಾದಯಾತ್ರೆಯಲ್ಲಿ ಮಾತನಾಡಿದ ಸಿಪಿಐ ಜಿಲ್ಲಾ ಸಮಿತಿ ಸದಸ್ಯ ಎಂ.ಸಿ. ಡೋಂಗ್ರೆ, ಕರ್ನಾಟಕ ಭೂ ಸುಧಾರಣಾ ಕಾಯ್ದೆ ತಿದ್ದುಪಡಿಯನ್ನು ಹಿಂಪಡೆಯಬೇಕು, ರಾಜ್ಯದ ಎಲ್ಲಾ ಸರ್ಕಾರಿ ಖಾಲಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು ಹಾಗೂ ಕೆಪಿಎಸ್‌ಸಿ ನೇಮಕಾತಿ ಹಗರಣಗಳ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ ಪಾರದರ್ಶಕತೆ ತರಬೇಕು ಎಂದು ಒತ್ತಾಯಿಸಿದರು.

ರಾಜ್ಯದ 50 ಲಕ್ಷ ವಸತಿರಹಿತ ಕುಟುಂಬಗಳಿಗೆ ನಿವೇಶನ ಹಾಗೂ ಮನೆ ನಿರ್ಮಾಣಕ್ಕೆ ಕನಿಷ್ಠ 5 ಲಕ್ಷ ರೂ. ಧನಸಹಾಯ ನೀಡಬೇಕು. ಅಪೂರ್ಣವಾಗಿರುವ ಜಲಜೀವನ್ ಮಿಷನ್ ಕಾಮಗಾರಿಗಳನ್ನು ಪೂರ್ಣಗೊಳಿಸುವ ಜೊತೆಗೆ ಬಲವಂತದ ಭೂ ಸ್ವಾಧೀನವನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯ ಸಮಸ್ಯೆಗಳ ಕುರಿತು ಪ್ರಸ್ತಾಪಿಸಿದ ಅವರು, ಕಾಡಾನೆಗಳ ಹಾವಳಿ ತಡೆಗೆ ಶಾಶ್ವತ ಆನೆ ಧಾಮ ನಿರ್ಮಿಸಬೇಕು, ವನ್ಯಜೀವಿಗಳಿಂದಾಗುವ ಪ್ರಾಣ ಹಾಗೂ ಬೆಳೆ ಹಾನಿಗೆ ವಿಮಾ ರಕ್ಷಣೆ ಜಾರಿಗೊಳಿಸಬೇಕು, ಹಾಸನ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಮಾದಕ ದ್ರವ್ಯಗಳ ಹಾವಳಿ ತಡೆಗೆ ವಿಶೇಷ ಕಾರ್ಯಪಡೆ ರಚಿಸಬೇಕು ಎಂದರು. ಕಳಪೆ ಬೀಜ ಮತ್ತು ಗೊಬ್ಬರದಿಂದ ರೈತರು ಸಂಕಷ್ಟದಲ್ಲಿದ್ದು, ಸರ್ಕಾರವೇ ಗುಣಮಟ್ಟದ ಬೀಜ ಹಾಗೂ ಗೊಬ್ಬರ ಪೂರೈಸಬೇಕು. ಮಳೆ ಕೊರತೆಯಿಂದ ಕಾಫಿ ಬೆಳೆ ಹಾನಿಯಾಗಿರುವುದರಿಂದ ವಿಶೇಷ ಪ್ಯಾಕೇಜ್ ಘೋಷಿಸಿ, ಹಾಸನ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ ರಾಜ್ಯ ಮುಖಂಡ ಸ್ವಾತಿ ಸುಂದರೇಶ್, ದೇಶದಲ್ಲಿ ಬೆಲೆ ಏರಿಕೆ, ನಿರುದ್ಯೋಗ ಹಾಗೂ ಜನವಿರೋಧಿ ನೀತಿಗಳಿಂದ ಜನರು ಸಂಕಷ್ಟದಲ್ಲಿದ್ದಾರೆ ಎಂದು ಆರೋಪಿಸಿದರು. ಕೇಂದ್ರ ಸರ್ಕಾರವು ಅಭಿವೃದ್ಧಿಗಿಂತ ಕೋಮುವಾದ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಮತ್ತು ಸಂವಿಧಾನದ ಆಶಯಗಳಿಗೆ ಧಕ್ಕೆ ತರುವ ಕ್ರಮಗಳಿಗೆ ಆದ್ಯತೆ ನೀಡುತ್ತಿದೆ ಎಂದು ಟೀಕಿಸಿದರು.

ರೈತರಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತ್ರಿಪಡಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದ್ದು, ಸಾಮಾನ್ಯ ಜನರ ಬದುಕು ಮತ್ತಷ್ಟು ಕಷ್ಟಕರವಾಗಿದೆ. ಈ ಹಿನ್ನೆಲೆಯಲ್ಲಿ ಸಮಾಜವಾದಿ ಪರ್ಯಾಯದತ್ತ ಜನರು ಸಾಗಬೇಕಿದ್ದು, ದೇಶದಲ್ಲಿ ಬದಲಾವಣೆ ಅನಿವಾರ್ಯವಾಗಿದೆ ಎಂದು ಅವರು ಹೇಳಿದರು.

ಆಗಸ್ಟ್ 6 ರಿಂದ 14ರ ವರೆಗೆ ದೇಶಾದ್ಯಂತ ನಡೆಯುತ್ತಿರುವ ಪಾದಯಾತ್ರೆಯು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲೂ ನಡೆಯಲಿದ್ದು, ಸೆಪ್ಟೆಂಬರ್ 1ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪಾದಯಾತ್ರೆಯಲ್ಲಿ ನೂರಾರು ಕಾರ್ಮಿಕರು, ರೈತರು ಹಾಗೂ ಸಿಪಿಐಯ ಕಾರ್ಯಕರ್ತರು ಭಾಗವಹಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ವಿವಿಧ ಜನಪರ ಬೇಡಿಕೆಗಳನ್ನು ಮುಂದಿಟ್ಟು ಘೋಷಣೆ ಹಾಕಿದರು.

ಸಿಪಿಐ ಮುಖಂಡರಾದ ಧರ್ಮರಾಜು, ಹರೀಶ್, ವೇದಾವತಿ, ಚಂದ್ರು, ಶಹಜನ್, ಮುಖಂಡರು ಪಾಲ್ಗೊಂಡಿದ್ದರು.

## ಅಸಾಧಾರಣ ಸಾಧನೆ: ಪ್ರಶಸ್ತಿಗೆ ಅರ್ಜಿ ಆಹ್ವಾನ

**ಹಾಸನ:** ನಾವೀನ್ಯತೆ, ತಾರ್ಕಿಕ ಸಾಧನೆಗಳು, ಕ್ರೀಡೆ ಕಲೆ, ಸಾಂಸ್ಕೃತಿಕ ಮತ್ತು ಸಂಗೀತ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿ ನೀಡುವ ಕುರಿತು ಆಯ್ಕೆ ಸಮಿತಿಯ ನಿರ್ಧಾರದ ಪ್ರಕಾರ ಮಾನ್ಯತೆಗೆ ಯೋಗ್ಯವಾದ ಸಾಧನೆಯನ್ನು ಮಾಡಿರುವಂತಹ 5 ರಿಂದ 18 ವರ್ಷದೊಳಗಿನ ಮಕ್ಕಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ಜಿಲ್ಲಾ ಮಟ್ಟದ ಪ್ರಶಸ್ತಿಯು ರೂ. 10000 ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ, ಈಗಾಗಲೇ ಹಿಂದಿನ ವರ್ಷಗಳಲ್ಲಿ ಆಯ್ಕೆಯಾಗಿರುವ ಮಕ್ಕಳನ್ನು ಹೊರತುಪಡಿಸಿ, ಪ್ರಶಸ್ತಿಗೆ ಆಯ್ಕೆಯಾಗುವಂತಹ ಮಕ್ಕಳು ಅಪ್ರತಿಮ ಪ್ರತಿಭೆಯುಳ್ಳವರಾಗಿರತಕ್ಕದ್ದು, ಅಸಾಧಾರಣ ಸಾಧನೆಯನ್ನು ಮಾಡಿರುವಂತಹ 4 ಕ್ಷೇತ್ರಗಳಿಂದ 8 ಮಕ್ಕಳನ್ನು ಆಯ್ಕೆ ಮಾಡಲು ಅವಕಾಶವಿದ್ದು, ಸದರಿ ಪ್ರಶಸ್ತಿಗಳಿಗೆ ಪೂರಕ ದಾಖಲಾತಿಗಳನ್ನು ಒದಗಿಸುವುದು. ಮಕ್ಕಳ ವಯಸ್ಸಿನ ಪ್ರಮಾಣ ಪತ್ರವನ್ನು ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.

2026-27ನೇ ವರ್ಷದ ಪ್ರಶಸ್ತಿಗೆ ನಿಗದಿಪಡಿಸಿದ ಅರ್ಜಿ ನಮೂನೆಗಳನ್ನು ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರ ಕಛೇರಿ. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇಲ್ಲಿಂದ ಪಡೆದು, ದ್ವಿಪ್ರತಿಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಸೆ.6 ಒಳಗೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇಲ್ಲಿಗೆ ಸಲ್ಲಿಸತಕ್ಕದ್ದು, ಮಾಹಿತಿಗಾಗಿ ದೂ. ಸಂ.:08172 295218 ಸಂಪರ್ಕಿಸಿ.

**ಪುರಸಭಾ ಕಾರ್ಯಾಲಯ, ಬೇಲೂರು**

E-mail: itstaff_ulb_belur@yahoo.co.in, townmunicipal.belur@gmail.com ದೂರವಾಣಿ: 08177-222221

ಸಂಖ್ಯೆ: ಪು.ಬೇ/ಜೆಇ/ಟೆಂಡರ್/ಸಿಆರ್/05/2026-27

ದಿನಾಂಕ: 04.08.2026

**ಮರು ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)**

ಬೇಲೂರು ಪುರಸಭೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲಗಳನ್ನು ಅಧಿಕೃತ ಏಜೆನ್ಸಿಗಳಿಂದ ಟೆಂಡರನ್ನು ಆಹ್ವಾನಿಸಲಾಗಿದ್ದು, ಅರ್ಹ ಏಜೆನ್ಸಿದಾರರು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಕ್ರ.ಸಂ.ವಿವರ: 1.DMA/2026-27/SE7845/CALL-2 ಅಂದಾಜು ಮೊತ್ತ 9,18,000-00 ಇ.ಎಂ.ಡಿ ಮೊತ್ತ 23,000-00 2.DMA/2026-27/SE7844/CALL-2 ಅಂದಾಜು ಮೊತ್ತ 5,97,500-00 ಇ.ಎಂ.ಡಿ ಮೊತ್ತ 15,000-00 ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಮುಖ್ಯಾಧಿಕಾರಿ, ಪುರಸಭೆ, ಬೇಲೂರು ರವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

**ಸಹಿ/-ಮುಖ್ಯಾಧಿಕಾರಿ, ಪುರಸಭೆ, ಬೇಲೂರು**

ವಾಸಾಸಂಇ/ಹಿಸನಿ/ಹಾಸನ/397/ಕೆಎಸ್‌ಎಂಸಿಎ/2026-27







- ಎಲ್ ನೀನೋದಿಂದ ಉಂಟಾಗಿರುವ ಬರದ ಪರಿಸ್ಥಿತಿ ನಿಭಾಯಿಸಲು ಸರ್ವ ಸನ್ನದ್ಧತೆ
- ಪ್ರತಿ **ಜಿಲ್ಲೆಗೆ ಕುಡಿಯುವ ನೀರಿಗಾಗಿ ₹5 ಕೋಟಿ** ಹಾಗೂ ಪ್ರತಿ **ವಿಧಾನಸಭಾ ಕ್ಷೇತ್ರಕ್ಕೆ ₹1 ಕೋಟಿ** ಹಂಚಿಕೆ
- ಪ್ರತಿ ಜಿಲ್ಲಾಧಿಕಾರಿಗಳ ಖಾತೆಗಳಲ್ಲಿ **ಬರ ಪರಿಹಾರಕ್ಕಾಗಿ ₹329 ಕೋಟಿ**
- ಸ್ಥಳೀಯ ಮಟ್ಟದಲ್ಲೇ ಉದ್ಯೋಗ ಸೃಷ್ಟಿಸಲು **ವಿಬಿ ಜಿ ರಾಮ್ ಜಿ ಯೋಜನೆ**ಯಡಿ ಕಾಮಗಾರಿಗಳ ಆರಂಭ
- ನೀರಿನ ಸೌಲಭ್ಯ ಇರುವ ರೈತರಿಗೆ **ಮೇವಿನ ಬೀಜಗಳ ವಿತರಣೆ**
- ಸರ್ಕಾರದಿಂದಲೇ ರೈತರು ಬೆಳೆದ **ಮೇವು ಖರೀದಿ**

ಶಕ್ತಿ ಅನ್ನಭಾಗ್ಯ ಗೃಹ ಜ್ಯೋತಿ ಗೃಹಲಕ್ಷ್ಮಿ ಯುವನಿಧಿ

CMofKarnataka https://dipr.karnataka.gov.in/

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ

## ಸರ್ಕಾರಿ ನೌಕರಿ ಪಡೆಯಲು ಕಠಿಣ ಪರಿಶ್ರಮ ಬೇಕು

» ಮೊದಲನೇ ಪುಟದಿಂದ

ಮಾಡುವುದನ್ನು ಕಡಿಮೆ ಮಾಡಿ, ಅಧ್ಯಯನ ಹಾಗೂ ಕೌಶಲ್ಯ ವೃದ್ಧಿಗೆ ಹೆಚ್ಚಿನ ಸಮಯ ಮೀಸಲಿಡಬೇಕು. ಜೀವನವನ್ನು ಗಂಭೀರವಾಗಿ ಪರಿಗಣಿಸಿ ಗುರಿಯೊಂದಿಗೆ ಶ್ರಮಿಸಿದರೆ ಮಾತ್ರ ಉತ್ತಮ ಭವಿಷ್ಯ ನಿರ್ಮಿಸಿಕೊಳ್ಳಲು ಸಾಧ್ಯವಾಗುತ್ತದೆಂದು ಜಿಲ್ಲಾಧಿಕಾರಿ ಕಿವಿಮಾತು ಹೇಳಿದರು.

ಕಾರ್ಯಾಗಾರದಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯಕ್ರಮ, ಅಧ್ಯಯನ ವಿಧಾನ, ಸಮಯ ನಿರ್ವಹಣೆ, ಸಂದರ್ಶನ ಕೌಶಲ ಹಾಗು ನೇಮಕಾತಿ ಪ್ರಕ್ರಿಯೆಗಳ ಕುರಿತು ತಜ್ಞರು ಸಮಗ್ರ ಮಾಹಿತಿ ನೀಡಿದರು.

ಬೆಂಗಳೂರು ಅಕ್ಷ ಐಎಎಸ್ ಅಕಾಡೆಮಿ ಮುಖ್ಯಸ್ಥ ಡಾ.ಶಿವಕುಮಾರ್, ವಿವಿಧ ನೇಮಕಾತಿ ಪರೀಕ್ಷೆಗಳ ಸ್ವರೂಪ, ಅಧ್ಯಯನ ತಂತ್ರಗಳು ಹಾಗು ಯಶಸ್ವಿ ಸೂತ್ರಗಳ ಕುರಿತು ಉಪನ್ಯಾಸ ನೀಡಿದರು. ಚನ್ನರಾಯಪಟ್ಟಣ ಪಿಐ ಸಂತೋಷ್ ಕುಮಾರ್ ಅವರು ಪೊಲೀಸ್ ನೇಮಕಾತಿ ಪರೀಕ್ಷೆಗಳ ದೈಹಿಕ ಹಾಗು ಲಿಖಿತ ಪರೀಕ್ಷೆಗಳ ಸಿದ್ಧತೆ ಕುರಿತು ಮಾರ್ಗದರ್ಶನ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪಿ.ದಿವಾಕರ್, ಸರ್ಕಾರಿ ಕಲಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ.ಮಹೇಶ್, ಪವರ್ ಇಂಡಿಯಾ ಅಕಾಡೆಮಿಯ ರಮೇಶ್, ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕ ಜಿ.ಎ.ನಳಿನಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮನುಕುಮಾರ್, ವಕೀಲ ಯೋಗೀಶ್ ಹಲಿಕೆರೆ, ಬಿವಿಎಸ್ ಜಿಲ್ಲಾ ಸಂಯೋಜಕ ಡಾ.ಶಶಿಧರ್ ಮೌರ್ಯ, ಪತ್ರಕರ್ತ ನಾಗರಾಜು ಹೆತ್ತೂರು, ರಾಮು ನರಸೀಪುರ ಮೊದಲಾದವರಿದ್ದರು.

## ನೀರಗುಂದದಲ್ಲಿ ಹೊಯ್ಸಳರ ಕಾಲದ ವೀರಗಲ್ಲು ಪತ್ತೆ

» ಮೊದಲನೇ ಪುಟದಿಂದ

ಪುಷ್ಯ ಮಾಸದ ಏಕಾದಶಿ, ಶಕ 1064 ಎಂದು ಉಲ್ಲೇಖವಾಗಿದ್ದು, ಗ್ರೆಗೋರಿಯನ್ ಕ್ಯಾಲೆಂಡರ್ ಪ್ರಕಾರ ಅದು 1141ರ ಡಿಸೆಂಬರ್ 11ಕ್ಕೆ ಹೊಂದಿಕೆಯಾಗುತ್ತದೆಂದು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ.

ಇದುವರೆಗೆ ವಿಷ್ಣುವರ್ಧನ ಅವರ ಮರಣದ ವರ್ಷ ಕುರಿತು 1149 ಮತ್ತು 1152 ಎಂಬ ಭಿನ್ನಾಭಿಪ್ರಾಯಗಳಿದ್ದವು. ಆದರೆ ನೀರಗುಂದದಲ್ಲಿ ಪತ್ತೆಯಾದ ಈ ಶಾಸನವು ಆ ಗೊಂದಲ ನಿವಾರಣೆಗೆ ಪ್ರಮುಖ ಸಾಕ್ಷಿಯಾಗುವ ಸಾಧ್ಯತೆ ಇದೆ ಎಂದು ಇತಿಹಾಸ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಾಸನ ಸರ್ಕಾರಿ ವಸ್ತುಸಂಗ್ರಹಾಲಯದ ಕ್ಯುರೇಟರ್ ಹೆಚ್.ಸಿ.ಕುಮಾರ್ ಅವರು ಸಹ ಸ್ಥಳಕ್ಕೆ ಭೇಟಿ ನೀಡಿ ಶಾಸನವನ್ನು ಪರಿಶೀಲಿಸಿದ್ದು, ಇದು ವಿಷ್ಣುವರ್ಧನರ ಕೊನೆಯ ದಿನಗಳ ಕುರಿತು ಮಹತ್ವದ ಮಾಹಿತಿ ನೀಡುವ ಅಪರೂಪದ ದಾಖಲೆಯಾಗಬಹುದೆಂದು ಹೇಳಿದ್ದಾರೆ. ಶಾಸನದ ಸಂಪೂರ್ಣ ವಿಶ್ಲೇಷಣೆ ಮತ್ತು ದೃಢೀಕರಣ ಕಾರ್ಯವನ್ನು ತಜ್ಞರು ಮುಂದುವರಿಸಿದ್ದಾರೆ.

ಇದೇ ವೇಳೆ, ಗ್ರಾಮಸ್ಥರು ಸುಮಾರು 13 ಲಕ್ಷ ರೂ. ವೆಚ್ಚದಲ್ಲಿ ದೇವಾಲಯ ಪುನರುಜ್ಜೀವನ ಕಾರ್ಯ ಕೈಗೊಂಡಿದ್ದು, ಈಗಾಗಲೇ 7 ಲಕ್ಷ ರೂ. ಸಂಗ್ರಹಿಸಿ ಖರ್ಚು ಮಾಡಿದ್ದಾರೆ. ಆದರೆ ನಿಧಿ ಕೊರತೆಯಿಂದ ಕಾಮಗಾರಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ದೇವಾಲಯದ ಜೊತೆಗೆ ಪತ್ತೆಯಾದ ಈ ಅಮೂಲ್ಯ ವೀರಗಲ್ಲು ಮತ್ತು ಶಾಸನವನ್ನು ಸಂರಕ್ಷಿಸಲು ಸರ್ಕಾರ ಮುಂದಾಗಬೇಕು ಎಂದು ಸ್ಥಳೀಯರು ಹಾಗು ಇತಿಹಾಸ ಸಂಶೋಧಕರು ಒತ್ತಾಯಿಸಿದ್ದಾರೆ.

# ಸ್ವಾವಲಂಬಿ ಬದುಕಿಗೆ ಆರ್ಥಿಕ ಸದೃಢತೆ ಮುಖ್ಯ



• ಪ್ರಜೋದಯ ವರದಿ

**ಹೊಳೆನರಸೀಪುರ:** ಮಹಿಳೆಯರು ಆರ್ಥಿಕವಾಗಿ ಸಬಲರಾದರೆ ಕುಟುಂಬ ಮತ್ತು ಸಮಾಜ ಸದೃಢವಾಗುತ್ತದೆ ಎಂದು ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮುನಿರಾಜು ಅವರು ಹೇಳಿದರು.

ತಾಲ್ಲೂಕಿನ ಬಾಗಿವಾಳು ಗ್ರಾಮದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಗ್ರಾಮೀಣ ಜೀವನೋ ಪಾಯ ಅಭಿಯಾನ (ಎನ್ ಆರ್‌ಎಲ್‌ಎಂ) ಮತ್ತು ನಿಸರ್ಗ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ವತಿಯಿಂದ ನಿರ್ಮಿಸಿರುವ ಸಕ್ಷಮ್ ಕೇಂದ್ರ(ಆರ್ಥಿಕ ಸಾಕ್ಷರತಾ ಹಾಗು ಸೇವಾ ವಿತರಣಾ ಕೇಂದ್ರ) ಉದ್ಘಾಟಿಸಿ ಅವರು ಮಾತನಾಡಿದ ಅವರು, ಸಂಘಟಿತ ಮಹಿಳೆಯರ ಸ್ವ-ಸಹಾಯ ಸಂಘ ಗುಂಪುಗಳಿಗೆ ಸಾಲ ಸೌಲಭ್ಯ ಸಂಬಂಧಿತ ಮಾಹಿತಿ ನೆರವು ನೀಡಲು ಸಕ್ಷಮ್ ಕೇಂದ್ರ ಪ್ರಾರಂಭಿಸಲಾಗಿದೆ. ಸ್ವಸಾಯ ಸಂಘದ ಗುಂಪುಗಳು ಈ ಕೇಂದ್ರದ ಮೂಲಕ ಆರ್ಥಿಕ ನೆರವಿನ ಸೌಲಭ್ಯಗಳ ಮಾಹಿತಿ ಪಡೆದು ಸದೃಢರಾಗಬೇಕೆಂದು ಹೇಳಿದರು.

ಖಾಸಗಿ ಫೈನಾನ್ಸ್ ಹಾಗು ಸಾಮಾಜಿಕ ಜಾಲತಾಣದಲ್ಲಿ ಡಿಜಿಟಲ್ ವಂಚನೆಯ ಜಾಲದ ಮೋಸಕ್ಕೆ ಮಹಿಳೆಯರು ಮತ್ತು ಸಂಘ ಸಂಸ್ಥೆಗಳು ಬಲಿಯಾಗಬಾರದು. ಈ ನಿಟ್ಟಿನಲ್ಲಿ ಆರ್ಥಿಕ ಸಾಕ್ಷರತೆ ಮತ್ತು ಸಂಬಂಧಿತ ಸೇವಾ ಮಾಹಿತಿಗಾಗಿ ಈ ಸಕ್ಷಮ್ ಕೇಂದ್ರ ಕಾರ್ಯನಿರ್ವಹಿಸಲಿದೆ. ಸ್ವಸಹಾಯದ ಗುಂಪುಗಳು ಅದರ ಸದ್ಬಳಕೆ ಮಾಡಿಕೊಳ್ಳಿ ಎಂದರು.

ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕ ನವೀನ್ ಅವರು ಮಾತನಾಡಿ, ಪ್ರತಿಯೊಬ್ಬರೂ ಆರ್ಥಿಕ ಸಾಕ್ಷರತೆ ಹೊಂದುವುದು ಇಂದಿನ ದಿನಗಳಲ್ಲಿ ಅತ್ಯಗತ್ಯವಾಗಿದೆ. ತಾವು ಗಳಿಸಿದ ಸಂಪಾದನೆಯಲ್ಲಿ ಉಳಿತಾಯ ಮಾಡುವ ವಿಧಾನ ಹಾಗು ಸರ್ಕಾರದ ಅನುದಾನ, ವಿಶೇಷ ಸಾಲ ಸೌಲಭ್ಯಗಳನ್ನು ಪಡೆಯುವ ಹಾಗು ಬಳಸಿಕೊಳ್ಳುವ ಸಾಮಾನ್ಯ ಜ್ಞಾನ ಇದ್ದಲ್ಲಿ ಸ್ವಾವ ಲಂಬಿಗಳಾಗಿ ಆರ್ಥಿಕವಾಗಿ ಪ್ರಗತಿ ಹೊಂದಬಹುದು. ಈ ನಿಟ್ಟಿನಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶದ ಮಹಿಳೆಯರು ಮತ್ತು ಸ್ವಸಹಾಯ ಸಂಘಗಳ ಗುಂಪಿಗೆ ಆರ್ಥಿಕ ಸಾಕ್ಷರತೆ ಮತ್ತು ಸಾಲ ಸೌಲಭ್ಯಗಳ ವಿತರಣಾ ಮಾಹಿತಿ ತಲುಪಿಸುವ ಸಲುವಾಗಿ ಈ ಕೇಂದ್ರ ಆರಂಭಿಸಲಾಗಿದೆ ಎಂದರು.

ಬಾಗಿವಾಳು ಗ್ರಾಮ ಪಂಚಾಯಿತಿ ಮಾಜಿ ಸದಸ್ಯರುದ್ರಮೂರ್ತಿ ಮಾತನಾಡಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೆ.ಸಿ.ವಿಜಯ್, ಎನ್‌ಆರ್‌ಎಲ್‌ಎಂ ವಲಯ ಮೇಲ್ವಿಚಾರಕಿ ನಿಸರ್ಗ, ಸ್ಥಳೀಯ ಸಂಪನ್ಮೂಲ ವ್ಯಕ್ತಿ ಚೈತ್ರ, ಮಂಜುಳಾ, ಕೃಷಿ ಸಖಿ ಸೌಮ್ಯ,

ಪಶುಸಖಿ ಸವಿತಾ ಬ್ಯಾಂಕಿನ ವ್ಯವಹಾರ ಪ್ರತಿನಿಧಿ ಭೂಮಿಕಾ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಕಡವಿನ ಕೋಟೆ ರಾಜೇಗೌಡ, ಮುರಳಿ, ಗ್ರಾಮಸ್ಥರಾದ ರುದ್ರಪ್ಪ ಮೊದಲಾದವರಿದ್ದರು.

## ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಪ್ರಕಾಶ್‌ಗೆ ಬೀಳ್ಕೊಡುಗೆ



• ಪ್ರಜೋದಯ ವರದಿ

**ಹಾಸನ:** ಶಾಲಾ ಶಿಕ್ಷಣ ಇಲಾಖೆಯಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಜಂಟಿ ನಿರ್ದೇಶಕ ಕೆ.ಎನ್.ಪ್ರಕಾಶ್ ಅವರಿಗೆ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ ದಲ್ಲಿ ಅಧಿಕಾರಿಗಳು, ಶಿಕ್ಷಕರು ಹಾಗು ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಆತ್ಮೀಯ ಬೀಳ್ಕೊಡುಗೆ ನೀಡಿದರು.

ಕೆ.ಎನ್.ಪ್ರಕಾಶ್ ಅವರು ತಮ್ಮ ಸೇವಾವಧಿಯಲ್ಲಿ ಶಿಕ್ಷಣ ಇಲಾಖೆಯಲ್ಲಿ ಪಾರದರ್ಶಕ ಆಡಳಿತ, ಸಿಬ್ಬಂದಿಯೊಂದಿಗೆ ಆತ್ಮೀಯ ಬಾಂಧವ್ಯ ಹಾಗು ವಿದ್ಯಾರ್ಥಿ ಹಿತಾಸಕ್ತಿಗೆ ಆದ್ಯತೆ ನೀಡುವ ಮೂಲಕ ಉತ್ತಮ ಅಧಿಕಾರಿಯಾಗಿ ಗುರುತಿಸಿಕೊಂಡಿದ್ದಾರೆ. ಅವರ ಕಾರ್ಯವೈಖರಿ ಇಲಾಖೆಯ ಸಿಬ್ಬಂದಿಗೆ ಮಾದರಿಯಾಗಿದೆ ಎಂದು ಸಹೋದ್ಯೋಗಿಗಳು ಅಭಿಪ್ರಾಯಪಟ್ಟರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾ ಘಟಕದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ರಾಷ್ಟ್ರೀಯ ಮಂಡಳಿ ಸದಸ್ಯ ರವಿ ನಾಕಲಗೂಡು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ್, ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ನಾಯಕರಹಳ್ಳಿ ಮಂಜೇಗೌಡ ಮತ್ತಿತರರಿದ್ದರು.

## ಆ.28ಕ್ಕೆ ಎಸ್ಸಿ-ಎಸ್ಟಿ ನೌಕರರ ಐಕ್ಯತಾ ಸಮಾವೇಶ

• ಪ್ರಜೋದಯ ವರದಿ




**ಚನ್ನರಾಯಪಟ್ಟಣ:** ರಾಜ್ಯ ಸರ್ಕಾರಿ ಎಸ್ಸಿ-ಎಸ್ಟಿ ನೌಕರರ ಸಮನ್ವಯ ಸಮಿತಿ ಕೇಂದ್ರ ಸಮಿತಿ ವತಿಯಿಂದ ಪರಿಶಿಷ್ಟ ಜಾತಿ-ಪಂಗಡಗಳ ಜಾಗೃತ ನೌಕರರ 6ನೇ ರಾಜ್ಯ ಮಟ್ಟದ ಐಕ್ಯತಾ ಸಮಾವೇಶವನ್ನು ಆ.28 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಏರ್ಪಡಿಸಲಾಗಿದೆ ಎಂದು ಸಮಿತಿ ರಾಜ್ಯಾಧ್ಯಕ್ಷ ಡಿ.ಶಿವಶಂಕರ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಸಮಾವೇಶವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಲಿದ್ದು, ಕಂದಾಯ ಸಚಿವ ಡಾ.ಜಿ. ಪರಮೇಶ್ವರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್. ಮುನಿಯಪ್ಪ, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹಾಗು ಶಾಸಕರು ಪಾಲ್ಗೊಳ್ಳಲಿದ್ದಾರೆಂದರು.

ರಾಜ್ಯದಲ್ಲಿ ಪರಿಶಿಷ್ಟ ಜಾತಿ- ಪಂಗಡಗಳ ಉದ್ಯೋಗ ಮತ್ತು ಶೈಕ್ಷಣಿಕವಾಗಿ ರಾಜ್ಯ ಸರ್ಕಾರ ನೀಡಿ ರುವ ಒಳ ಮೀಸಲಾತಿ ಕುರಿತು ಕಾಂಗ್ರೆಸ್ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿರುವಂತೆ ಎನ್‌ಪಿಎಸ್ (ಹಳೆಯ ಪಿಂಚಣಿ ಯೋಜನೆ) ಹಿಂಪಡೆದು ರಾಜ್ಯ ಸರ್ಕಾರಿ ನೌಕರರಿಗೆ ಓಪಿಎಸ್ ಜಾರಿ ಮಾಡ ಬೇಕು. ಸೇವಾ ವಲಯದಲ್ಲಿ ಮೀಸ ಲಾತಿ ಸೌಲಭ್ಯ ಅನುಷ್ಠಾನಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆ ಭರ್ತಿಗೆ ಒತ್ತಾಯಿಸಲಾಗುವುದೆಂದರು.

ರಾಜ್ಯ ಸರ್ಕಾರಿ ಎಸ್ಸಿ-ಎಸ್ಟಿ ನೌಕರರ ಸಮನ್ವಯ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಎಸ್.ವಿಜಯಕುಮಾರ್, ಉಪಾಧ್ಯಕ್ಷರಾದ ಆರ್. ಮೋಹನ್, ಕೆಂಪಸಿದ್ದಯ್ಯ, ತಾಲ್ಲೂಕು ಅಧ್ಯಕ್ಷ ಜಲೇಂದ್ರ, ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ವೆಂಕಟೇಶ್, ತಾಲ್ಲೂಕು ಸಹಕಾರ್ಯದರ್ಶಿ ಸತೀಶ್, ಉಪಾಧ್ಯಕ್ಷ ಪುಟ್ಟರಾಜು ಹಾಜರಿದ್ದರು.

# ದೈಹಿಕ-ಮಾನಸಿಕ ಸದೃಢತೆಗೆ ಕ್ರೀಡೆ ಸಹಕಾರಿ: ಬಾಲಕೃಷ್ಣ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಶಿಕ್ಷಣದ ಜೊತೆಗೆ ಕ್ರೀಡಾಭ್ಯಾಸಕ್ಕೂ ಮಕ್ಕಳು ಆದ್ಯತೆ ನೀಡಬೇಕು. ಕ್ರೀಡೆ ದೈಹಿಕ ಹಾಗು ಮಾನಸಿಕ ಸದೃಢತೆಗೆ ಪೂರಕವಾಗಿದ್ದು, ಪ್ರಾಥಮಿಕ ಹಂತದಲ್ಲೇ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯವೆಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಶ್ರವಣಬೆಳಗೊಳದ ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ ಶುಕ್ರವಾರ ನಡೆದ ಹೋಬಳಿ ಮಟ್ಟದ ಪ್ರಾಥಮಿಕ ಶಾಲಾ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ಹೋಬಳಿ ಹಾಗು ತಾಲ್ಲೂಕು ಮಟ್ಟದ ಕ್ರೀಡಾಕೂಟಗಳನ್ನು ಆಯೋಜಿಸಲು ಸರ್ಕಾರದಿಂದ ಅನುದಾನ ದೊರೆಯುತ್ತಿಲ್ಲವೆಂದರು.

ಸರ್ಕಾರವು ಹೋಬಳಿ ಮತ್ತು ತಾಲ್ಲೂಕು ಮಟ್ಟದ ಕ್ರೀಡಾಕೂಟಗಳಿಗೂ ಸೂಕ್ತ ಅನುದಾನ ನೀಡುವ ಮೂಲಕ ಕ್ರೀಡಾ ವಿದ್ಯಾರ್ಥಿಗಳನ್ನು ಉತ್ತೇಜಿಸಬೇಕು. ಗ್ರಾಮೀಣ ಭಾಗದ ವಿದ್ಯಾ ರ್ಥಿಗಳಲ್ಲೂ ಅಪಾರ ಕ್ರೀಡಾ ಪ್ರತಿಭೆ ಇದೆ. ಆದರೆ ಸೂಕ್ತ ತರಬೇತಿ ಹಾಗು ಮಾರ್ಗದರ್ಶನದ ಕೊರತೆಯಿಂದ ಪ್ರತಿಭೆಗಳು ಬೆಳಕಿಗೆ ಬರುತ್ತಿಲ್ಲ. ಆದ್ದರಿಂದ ಕನಿಷ್ಟ ಪ್ರತಿ ಹೋಬಳಿಗೆ ಒಬ್ಬರು ದೈಹಿಕ ಶಿಕ್ಷಕರನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ತಾಲ್ಲೂಕಿನ ಹಲವು ಪ್ರಾಥಮಿಕ ಶಾಲೆಗಳಲ್ಲಿ ಕೊಠಡಿಗಳ ಕೊರತೆ ಇದೆ. ಮಕ್ಕಳಿಗೆ ಉತ್ತಮ ಕಲಿಕಾ ವಾತಾವರಣ ಕಲ್ಪಿಸಲು ಅಗತ್ಯವಿರುವ ಮೂಲಸೌಕರ್ಯ ಒದಗಿಸುವುದು ಸರ್ಕಾರದ ಆದ್ಯತೆಯಾಗಬೇಕು. ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ಕೆಪಿಎಸ್ ಶಾಲೆಗಳಿಗೆ ಅಗತ್ಯ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದೆಂದು ಭರವಸೆ ನೀಡಿದರು.

ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಎನ್.ಗೋಪಾಲ್ ಅವರು ಮಾತನಾಡಿ, ಶಿಕ್ಷಣ ಮತ್ತು ಆರೋಗ್ಯ ಎರಡೂ ಉತ್ತಮ ಸಮಾಜ ನಿರ್ಮಾಣದ ಪ್ರಮುಖ ಆಧಾರ ಸ್ತಂಭಗಳಾಗಿವೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣದ ಜೊತೆಗೆ ಕ್ರೀಡೆ ಮತ್ತು ಆರೋಗ್ಯಕ್ಕೂ ಸಮಾನ ಆದ್ಯತೆ ನೀಡಬೇಕು. ಕ್ರೀಡೆ ಕೇವಲ ಮನರಂಜನೆಯ ಸಾಧನವಲ್ಲ. ಅದು ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯ ಪಾಲನೆ, ಆತ್ಮವಿಶ್ವಾಸ, ನಾಯಕತ್ವ ಗುಣ ಹಾಗು ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಸುತ್ತದೆಂದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎನ್. ಲೋಕೇಶ್ ಅವರು ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ ದೈಹಿಕ ಹಾಗು ಮಾನಸಿಕವಾಗಿ ಸದೃಢರಾಗಬೇಕು. ನಿಯಮಿತವಾಗಿ ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಕ್ಷಮತೆ ಹೆಚ್ಚುವುದರ ಜೊತೆಗೆ ಏಕಾಗ್ರತೆ ಮತ್ತು ಕಲಿಕೆಯ ಸಾಮರ್ಥ್ಯವೂ ವೃದ್ಧಿಯಾಗುತ್ತದೆ. ಕ್ರೀಡಾಕೂಟದಲ್ಲಿ ಗೆಲುವು ಸಾಧಿಸುವುದಕ್ಕಿಂತ ಶಿಸ್ತು ಬದ್ಧವಾಗಿ ಭಾಗವಹಿಸುವುದು ಮತ್ತು ಕ್ರೀಡಾ ಮನೋಭಾವ ಬೆಳೆಸಿಕೊಳ್ಳುವುದು ಮುಖ್ಯ. ಸೋಲು ಎದುರಾದಾಗ ನಿರಾಶರಾಗದೆ, ಅದನ್ನು ಮುಂದಿನ ಗೆಲುವಿಗೆ ಮೆಟ್ಟಿಲಾಗಿ ಪರಿಗಣಿಸಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಅಫ್ತಾಬ್ ಪಾಷಾ, ಪಿಎಸ್‌ಐ ನವೀನ್, ಕ್ಷೇತ್ರ ಶಿಕ್ಷಣಾಧಿಕಾರಿ ಸತೀಶ್, ಬಿಆರ್‌ಸಿ ಅನಿಲ್, ಇಸಿಓ ಯಾದವರಾಜ್, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕ ಪಿ.ಟಿ.ಮಂಜೇಶ್, ಜಿಲ್ಲಾ ಕಾರ್ಯದರ್ಶಿ ವಿ.ಜಿ.ದೇವೇಗೌಡ, ಖಜಾಂಚಿ ಅಣ್ಣಪ್ಪ, ಅಕ್ಷರ ದಾಸೋಹ ಅಧಿಕಾರಿ ಉಮಾಶಂಕರ್ ಇದ್ದರು.

## ಚಿಕ್ಕಮತಿಘಟ್ಟದಲ್ಲಿ ಕೃಷಿ ಕಾರ್ಯಾನುಭವ ಶಿಬಿರ




• ಪ್ರಜೋದಯ ವರದಿ

**ಹಾಸನ:** ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ಚಿಕ್ಕಮತಿ ಘಟ್ಟ ಗ್ರಾಮದಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಬೆಳೆಗೆ ಡ್ರೋನ್ ಮೂಲಕ ಔಷಧಿ ಸಿಂಪಡಣೆ, ಯಾಂತ್ರಿಕ ಕಬ್ಬು ಕೊಯ್ಲು ಕುರಿತು ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

ಗ್ರೋಮೋರ್ ಕಂಪನಿ ವತಿಯಿಂದ ಶುಂಠಿ ಬೆಳೆ ಹೊಲದಲ್ಲಿ ಡ್ರೋನ್ ಮೂಲಕ ಬೆಳೆ ಸಂರಕ್ಷಣಾ ಔಷಧ ಸಿಂಪಡಣೆಯ ಪ್ರಾತ್ಯಕ್ಷಿಕೆ ಆಯೋಜಿಸಲಾಗಿತ್ತು. ಡ್ರೋನ್ ಬಳಕೆಯಿಂದ ಕಡಿಮೆ ಸಮಯದಲ್ಲಿ ಸಮರ್ಪಕ ಔಷಧ ಸಿಂಪಡಣೆ, ಕಾರ್ಮಿಕ ವೆಚ್ಚದ ಉಳಿತಾಯ, ರಾಸಾ ಯನಿಕಗಳ ನೇರ ಸಂಪರ್ಕದಿಂದ ರೈತರ ಆರೋಗ್ಯ ರಕ್ಷಣೆ ಹಾಗು ನಿಖರ ಕೃಷಿಯ ಮಹತ್ವದ ಬಗ್ಗೆ ತಜ್ಞರು ವಿದ್ಯಾರ್ಥಿಗಳಿಗೆ ವಿವರಿಸಿದರು.

ಡ್ರೋನ್ ಕಾರ್ಯವಿಧಾನ, ಸುರಕ್ಷತಾ ಕ್ರಮ ಹಾಗು ಆಧುನಿಕ ಕೃಷಿಯಲ್ಲಿ ಅದರ ಉಪಯೋಗಗಳ ಕುರಿತು ವಿದ್ಯಾರ್ಥಿಗಳು ಪ್ರಾಯೋಗಿಕ ಮಾಹಿತಿ ಪಡೆದರು.

ಇದೇ ಸಂದರ್ಭದಲ್ಲಿ ಹೇಮಾವತಿ ಸಕ್ಕರೆ ಕಾರ್ಖಾನೆ ವತಿಯಿಂದ ಯಾಂತ್ರಿಕ ಕಬ್ಬು ಕೊಯ್ಲು ಯಂತ್ರದ ಪ್ರಾತ್ಯಕ್ಷಿಕೆ ನಡೆಯಿತು. ಕಡಿಮೆ ಸಮಯದಲ್ಲಿ ಹೆಚ್ಚಿನ ಪ್ರಮಾಣದ ಕಬ್ಬನ್ನು ಕೊಯ್ಲು ಮಾಡುವ ವಿಧಾನ ವನ್ನು ವಿದ್ಯಾರ್ಥಿಗಳು ವೀಕ್ಷಿಸಿದರು. ಕಾರ್ಮಿಕರ ಕೊರತೆಯ ಸಂದರ್ಭ ದಲ್ಲಿ ಯಾಂತ್ರೀಕೃತ ಕೊಯ್ಲಿನ ಅಗತ್ಯತೆ, ಸಮಯ ಮತ್ತು ವೆಚ್ಚದ ಉಳಿತಾಯ, ಯಂತ್ರದ ಕಾರ್ಯ ವಿಧಾನ ಹಾಗು ರೈತರಿಗೆ ದೊರೆಯುವ ಪ್ರಯೋಜನಗಳ ಕುರಿತು ತಜ್ಞರು ವಿವರಿಸಿದರು.

## ವಿದ್ಯುತ್ ಕಂಬ, ಅಡಿಕೆ ಮರ ಉರುಳಿಸಿದ ಕಾಡಾನೆ

• ಪ್ರಜೋದಯ ವರದಿ



**ಸಕಲೇಶಪುರ:** ಕಾಡಾನೆ ಗ್ರಾಮದ ಸಮೀಪ ಸಂಚರಿಸುತ್ತಿದ್ದ ವೇಳೆ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಅದನ್ನು ಉರುಳಿಸಿದ ಪರಿಣಾಮ ವಿದ್ಯುತ್ ಸಂಪರ್ಕ ಕಡಿತಗೊಂಡು ಗ್ರಾಮಸ್ಥರು ರಾತ್ರಿ ಪೂರ್ತಿ ಕತ್ತಲಲ್ಲೇ ಕಾಲ ಕಳೆಯಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.

ಘಟನೆ ನಡೆದ ತಕ್ಷಣ ಮಾಹಿತಿ ಪಡೆದ ಬೆಸ್ಕಾಂ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಹಾನಿಗೊಳಗಾದ ವಿದ್ಯುತ್ ಕಂಬವನ್ನು ಬದಲಾಯಿಸುವ ಹಾಗೂ ವಿದ್ಯುತ್ ಸಂಪರ್ಕವನ್ನು ಮರುಸ್ಥಾಪಿಸುವ ಕಾರ್ಯ ಕೈಗೊಂಡರು.

ಇದೇ ಕಾಡಾನೆ ರಸ್ತೆ ಮಧ್ಯೆ ಅಡಿಕೆ ಮರವೊಂದನ್ನೂ ಕೆಡವಿದ್ದು, ಕೆಲ ಕಾಲ ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ಬೆಳಗ್ಗೆ ಈ ಮಾರ್ಗದಲ್ಲಿ ಸಂಚರಿಸುತ್ತಿದ್ದ ವಾಹನ ಸವಾರರು ತೊಂದರೆ ಅನುಭವಿಸಿದರು. ಬಳಿಕ ಸ್ಥಳೀಯರು ಹಾಗೂ ಸಂಬಂಧಪಟ್ಟ ಸಿಬ್ಬಂದಿ ಮರವನ್ನು ತೆರವುಗೊಳಿಸಿದ ನಂತರ ಸಂಚಾರ ಸುಗಮವಾಯಿತು.

ಗ್ರಾಮಸ್ಥರ ಮಾಹಿತಿ ಪ್ರಕಾರ, ಕಳೆದ ಸುಮಾರು ಒಂದು ತಿಂಗಳಿಂದ ಇದೇ ಕಾಡಾನೆ ಬಣಾಲ್ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ನಿರಂತರವಾಗಿ ಸಂಚರಿಸುತ್ತಿದ್ದು, ಕಾಫಿ, ಬಾಳೆ, ಅಡಿಕೆ ಸೇರಿದಂತೆ ವಿವಿಧ ಕೃಷಿ ಬೆಳೆಗಳಿಗೆ ಅಪಾರ ಹಾನಿ ಉಂಟು ಮಾಡುತ್ತಿದೆ. ರಾತ್ರಿ ವೇಳೆ ಗ್ರಾಮಗಳ ಸಮೀಪವೇ ಓಡಾಡುತ್ತಿರುವುದರಿಂದ ರೈತರು ತೋಟಗಳಿಗೆ ತೆರಳಲು ಸಹ ಭಯಪಡುವಂತಾಗಿದೆ.

ಮಹಿಳೆಯರು, ಮಕ್ಕಳು ಹಾಗೂ ವಯೋವೃದ್ಧರು ಸಂಜೆ ಬಳಿಕ ಮನೆಯಿಂದ ಹೊರಬರಲು ಆತಂಕ ವ್ಯಕ್ತಪಡಿಸುತ್ತಿದ್ದು, ರೈತರು ರಾತ್ರಿ ವೇಳೆ ಬೆಳೆ ಕಾವಲು ಕಾಯುವುದಕ್ಕೂ ಹಿಂದೇಟು ಹಾಕುತ್ತಿದ್ದಾರೆ. ಹಲವು ಬಾರಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರೂ ತಾತ್ಕಾಲಿಕ ಕ್ರಮಗಳನ್ನು ಹೊರತುಪಡಿಸಿ ಶಾಶ್ವತ ಪರಿಹಾರ ಕಲ್ಪಿಸಲು ಸಾಧ್ಯವಾಗಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಕಾಡಾನೆಯನ್ನು ಸುರಕ್ಷಿತವಾಗಿ ಅರಣ್ಯ ಪ್ರದೇಶಕ್ಕೆ ಓಡಿಸುವುದು, ಅದರ ಚಲನವಲನದ ಮೇಲೆ ನಿರಂತರ ನಿಗಾ ವಹಿಸುವುದು, ಅಗತ್ಯವಿದ್ದಲ್ಲಿ ಆನೆ ಕಾರ್ಯಪಡೆಯನ್ನು ನಿಯೋಜಿಸುವುದು ಹಾಗೂ ಗ್ರಾಮಗಳಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಮಾನವ ವಸತಿ ಪ್ರದೇಶದ ಸಮೀಪ ಕಾಡಾನೆ ನಿರಂತರವಾಗಿ ಕಾಣಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಯಾವುದೇ ಕ್ಷಣದಲ್ಲಿ ಜೀವಹಾನಿ ಸಂಭವಿಸುವ ಸಾಧ್ಯತೆ ಇರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಂಡು ಗ್ರಾಮಸ್ಥರ ಜೀವ ಹಾಗೂ ಆಸ್ತಿಪಾಸ್ತಿಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

## ಕಲ್ಲೇನಹಳ್ಳಿ ಅನ್ನಪೂರ್ಣೇಶ್ವರಿ ದೇಗುಲದಲ್ಲಿ ಆಷಾಢ ಪೂಜೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ತಾಲ್ಲೂಕಿನ ಕಲ್ಲೇನಹಳ್ಳಿ ಒಳನಾಡು ಅನ್ನಪೂರ್ಣೇಶ್ವರಿ ದೇವಿಯ ಮಹಾ ರಥೋತ್ಸವ ನೂರಾರು ಭಕ್ತರ ಸಮ್ಮುಖದಲ್ಲಿ ಆಷಾಢ ಮಾಸದ ಕಡೆ ಶುಕ್ರವಾರ ವಿಜೃಂಭಣೆಯಿಂದ ನೆರವೇರಿತು.

ನಿಸರ್ಗ ರಮಣೀಯ ತಾಣದಲ್ಲಿ ನೆಲೆಸಿರುವ ಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ರಥೋತ್ಸವದ ಪೂಜಾ ವಿಧಿವಿಧಾನಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು.

ಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ಮಂಗಳವಾದ್ಯ ಸಹಿತ ಸುಪ್ರಭಾತ, ಮಹಾಭಿಷೇಕ, ರಥಸಂಪ್ರೋಕ್ಷಣೆ ಪರಿವಾರ ದೇವತೆಗಳ ಸಮೇತ ಆದಿಶಕ್ತಾತ್ಮಕ ಶ್ರೀ ಅನ್ನಪೂರ್ಣೇಶ್ವರಿ ಮೂಲ ಮಂತ್ರ ಹೋಮ ಪೂರ್ಣಾಹುತಿ, ಸುವಾಸಿನಿಯರಿಂದ ಸಹಸ್ರ ನಾಮ ಪಾರಾಯಣ ಅರ್ಚನೆ ಯೊಂದಿಗೆ ಆರಂಭಗೊಂಡ ಜಾತ್ರಾ ಮಹೋತ್ಸವದಲ್ಲಿ ಅಮ್ಮನವರಿಗೆ ವಿಶೇಷ ಹೂವಿನ ಅಲಂಕಾರ ಮಾಡಿದ್ದು, ಉತ್ಸವ ಮೂರ್ತಿಯನ್ನು ಅಡ್ಡೆ ಉತ್ಸವ ಮಾಡಿ ತರಲಾಯಿತು.

ನಂತರ ಅಲಂಕೃತ ರಥದಲ್ಲಿ ಸ್ಥಾಪಿಸಿ ಮಹಾಮಂಗಳಾರತಿ ನಂತರ ಭಕ್ತರು ರಥವನ್ನು ಎಳೆದು ಪುನೀತರಾದರು. ದೇವರಿಗೆ ಫಲ, ಪುಷ್ಪಾದಿ ಅರ್ಚನೆ ಮಾಡುವ ಜೊತೆಗೆ ಬಾಳೆಹಣ್ಣು, ಹೂವನ್ನು ಮಹಾ ರಥಕ್ಕೆ ಸಮರ್ಪಿಸಿದರು. ರಥದ ಚಕ್ರಕ್ಕೆ ತೆಂಗಿನಕಾಯಿ ಒಡೆದು ಕೆಲವು ಭಕ್ತರು ಹರಕೆ ತೀರಿಸಿದರು.

ಮಂಗಳವಾದ್ಯ, ಚಾಮನ ಕುಣಿತ ಪ್ರದರ್ಶನ ರಥೋತ್ಸವಕ್ಕೆ ಮೆರುಗು ನೀಡಿತು. ಪ್ರಧಾನ ಅರ್ಚಕ ವೇದಮೂರ್ತಿ ಎಸ್.ಸುದರ್ಶನ ಶರ್ಮ ಮಹಿಳೆಯರಿಗೆ ಅರಿಶಿಣ, ಕುಂಕುಮ, ಬಳೆ, ಮಂಗಳ ದ್ರವ್ಯ ವಿತರಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮ ಬಾಲಕೃಷ್ಣ, ವಿವಿಧ ಮಠಗಳ ಮಠಾಧೀಶರು, ರಾಜಕೀಯ ಮುಖಂಡರು ಹಾಗು ಭಕ್ತರು ಹಾಜರಿದ್ದರು.

## ಆ.13ಕ್ಕೆ ಬೆಂಗಳೂರಿನಲ್ಲಿ ಹೊರಗುತ್ತಿಗೆ ನೌಕರರ ಪ್ರತಿಭಟನೆ

• ಪ್ರಜೋದಯ ವರದಿ




**ಹಾಸನ:** ರಾಜ್ಯದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ವೇತನ ಹೆಚ್ಚಳಕ್ಕೆ ಆಗ್ರಹಿಸಿ ಆ.13ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಮಟ್ಟದ ಸಮಾವೇಶ ಹಾಗು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರಿ ಇಲಾಖೆ ಗಳ ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ ಎಂ.ಬಿ.ನಾಗಣ್ಣಗೌಡ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಕನಿಷ್ಟ ವೇತನ ಪರಿಷ್ಕರಿಸಿ ಸರ್ಕಾರ ಅಧಿಸೂಚನೆ ಹೊರಡಿಸಿ 3 ತಿಂಗಳು ಕಳೆದರೂ ಕೆಲವು ಇಲಾಖೆಗಳಲ್ಲಿ ಜಾರಿಯಾಗಿಲ್ಲ. ಸುಮಾರು 2 ಲಕ್ಷ ಹೊರಗುತ್ತಿಗೆ ನೌಕರರು ಕಡಿಮೆ ವೇತನದಲ್ಲಿ ದುಡಿಯುತ್ತಿದ್ದು, ಬದುಕು ನಿರ್ವಹಣೆ ಕಷ್ಟವಾಗಿದೆ. ಸರ್ಕಾರ ನ್ಯಾಯಸಮ್ಮತ ವೇತನ ನೀಡಲು ಮುಂದಾಗದಿರುವುದು ಕಾರ್ಮಿಕರ ಬದುಕನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವೇತನ ಪರಿಷ್ಕರಣೆ ಬೇಡಿಕೆ ಹಲವು ವರ್ಷಗಳದ್ದು, ಅದಕ್ಕಾಗಿ ಹಲವು ರೀತಿಯ ಹೋರಾಟ ನಡೆದಿವೆ. ಕಡೆಗೆ ನ್ಯಾಯಾಲಯದ ಮಧ್ಯ ಪ್ರವೇಶ ಬಳಿಕ ಕಾರ್ಮಿಕ ಇಲಾಖೆ ಶೇ.40ರಷ್ಟು ವೇತನ ಹೆಚ್ಚಳ ಮಾಡಿದೆ. ಆದರೆ, ಪರಿಷ್ಕೃತ ವೇತನ ಜಾರಿಗೆ ಕೆಲವು ಖಾಸಗಿ ಉದ್ಯಮಿಗಳು ಆಕ್ಷೇಪ ವ್ಯಕ್ತಪಡಿಸಿ ನ್ಯಾಯಾಲಯದ ಮೊರೆ ಹೋಗಿರುವುದನ್ನೇ ನೆಪವಾಗಿಸಿ ಸರ್ಕಾರವೇ ಅಧಿ ಸೂಚನೆ ಜಾರಿಗೊಳಿಸುವಲ್ಲಿ ಹಿಂದೆ ಸರಿದಿದೆ ಎಂದು ಆರೋಪಿಸಿದರು. ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವುದನ್ನು ಕಾರಣವನ್ನಾಗಿ ಹೇಳಿ ಇಲಾಖೆಗಳು ತಮ್ಮ ಜವಾಬ್ದಾರಿ ಯಿಂದ ತಪ್ಪಿಸಿಕೊಳ್ಳುತ್ತಿವೆ. ಸರ್ಕಾರಿ ಇಲಾಖೆಗಳ ಮುಖ್ಯಸ್ಥರು ಸರ್ಕಾರದಿಂದ ಯಾವುದೇ ಸ್ಪಷ್ಟ ಸೂಚನೆ ಬಂದಿಲ್ಲ ಎಂಬ ನೆಪ ಹೇಳುತ್ತಾ ಪರಿಷ್ಕೃತ ವೇತನ ಜಾರಿಗೆ ಮುಂದಾಗುತ್ತಿಲ್ಲ. ಕಾರ್ಮಿಕ ಇಲಾಖೆ ಕೇವಲ ವೇತನದ ಮಾಹಿತಿ ನೀಡುವ ಮಟ್ಟಕ್ಕೆ ಸೀಮಿತವಾಗಿದ್ದು, ಅಧಿ ಸೂಚನೆ ಅನುಷ್ಠಾನಗೊಳಿಸುವ ಹೊಣೆಗಾರಿಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿಲ್ಲ ಎಂದು ದೂರಿದರು.

ಸರ್ಕಾರಿ ಇಲಾಖೆಗಳ ಹೊರಗುತ್ತಿಗೆ ನೌಕರರಿಗೆ ಪರಿಷ್ಕೃತ ಕನಿಷ್ಠ ವೇತನ ಜಾರಿಗೊಳಿಸಲು ಯಾವುದೇ ಕಾನೂನು ತೊಡಕು ಇಲ್ಲ. ಕೋರ್ಟ್ ಯಾವುದೇ ತಡೆ ಕೊಟ್ಟಿಲ್ಲ. ಆದರೂ ಸರ್ಕಾರ ಉದ್ದೇಶ ಪೂರ್ವಕವಾಗಿ ವಿಳಂಬ ಮಾಡುತ್ತಿರುವುದು ಕಾರ್ಮಿಕ ವಿರೋಧಿ ಧೋರಣೆಯಾಗಿದೆ. ಈ ಕಾರಣದಿಂದಲೇ ಆ.13 ರಂದು ಬೃಹತ್ ಆಗ್ರಹ ಸಮಾವೇಶ ನಡೆಸಿ ಸರ್ಕಾರಕ್ಕೆ ಎಚ್ಚರಿಕೆ ಸಂದೇಶ ರವಾನೆ ಮಾಡುತ್ತೇವೆ. ಸಮಾವೇಶದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಂದ ಹತ್ತು ಸಾವಿರಾ ರಕ್ಕೂ ಹೆಚ್ಚಿನ ಹೊರಗುತ್ತಿಗೆ ನೌಕರರು ಭಾಗವಹಿಸಲಿದ್ದಾರೆ. ಪರಿಷ್ಕೃತ ಕನಿಷ್ಠ ವೇತನವನ್ನು ತಕ್ಷಣ ಜಾರಿಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜೇಂದ್ರ, ಸರೋಜಮ್ಮ, ಮನು, ರಾಜೇಂದ್ರ, ವೆಂಕಟಲಕ್ಷ್ಮಿ ಇದ್ದರು.

### ಅಗತ್ಯ ವೈದ್ಯರ ಕೊರತೆ ನೀಗಿಸುವಂತೆ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಸ್ವಾಮಿಗೌಡ ಮನವಿ

# ಅರಕಲಗೂಡು ಸಾರ್ವಜನಿಕ ಆಸ್ಪತ್ರೆಗೆ ಇಲ್ಲಗಳ ರೋಗ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ತುಂಬಾ ಅವಶ್ಯವಿರುವ ಮಕ್ಕಳ ತಜ್ಞರು, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು, ರೇಡಿಯಾಲಜಿಸ್ಟ್ ಹಾಗೂ ಅರವಳಿಗೆ ತಜ್ಞ ವೈದ್ಯರುಗಳ ಕೊರತೆಯಿಂದ ಸಕಾಲಿಕವಾಗಿ ಜನ ಸಾಮಾನ್ಯರಿಗೆ ಆರೋಗ್ಯ ಸೇವೆ ಕಲ್ಪಿಸಲು ಸಾಧ್ಯವಾಗುತ್ತಿಲ್ಲ. ಈ ಕೂಡಲೇ ಅಗತ್ಯ ವೈದ್ಯರುಗಳ ಕೊರೆತೆಯನ್ನು ನೀಗಿಸುವಂತೆ ಆಸ್ಪತ್ರೆಯ ಆಡಳಿತಾ ವೈದ್ಯಾಧಿಕಾರಿ ಡಾ.ಸ್ವಾಮಿಗೌಡ ಅವರು ಇಲಾಖೆಯ ಮೇಲಾಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಸ್ಪತ್ರೆಯು 100 ಹಾಸಿಗೆಗಳು, 13 ಐಸಿಯು ವಾರ್ಡ್‌ನ್ನು ಹೊಂದಿದೆ. ಪ್ರತಿ ದಿನ 500 ರಿಂದ 600 ಮಂದಿ ಆಸ್ಪತ್ರೆಗೆ ಚಿಕಿತ್ಸೆಗೆಂದು ಬರುತ್ತಾರೆ. ಒಟ್ಟು 12 ಮಂದಿ ವೈದ್ಯರುಗಳ ಮಂಜೂರಾತಿ ಇದ್ದು, ಹಾಲಿ 7 ಮಂದಿ ಮಾತ್ರ



ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಪ ೈ ಕಿ ಡಾ.ನಿಶಿತಾ ಕೆ. ಅವರು ಮಾ.23 ರಂದು ಕರ್ತವ್ಯಕ್ಕೆ ವರದಿಯಾಗಿದ್ದು, ಇಲ್ಲಿಯವರೆಗೂ ಕರ್ತವ್ಯಕ್ಕೆ ಅನಧಿಕೃತ ಗೈರಾಗಿದ್ದಾರೆ ಎಂದು ಹೇಳಿದರು.

ಕೀಲು,ಮೂಳೆ ತಜ್ಞ ಡಾ.ಹರೀಶ್ ಅವರು ಕೂಡ ಫೆ.27ರಂದು ಸ್ವಯಂ ನಿವೃತ್ತಿಗಾಗಿ ಅರ್ಜಿ ನೀಡಿದ್ದಾರೆ. ಡಾ. ಎ.ಸ್ಮಿತಾ ಅವರು ಹೆರಿಗೆ ರಜೆಯಲ್ಲಿ ಇರುತ್ತಾರೆ. ಯಾರೊಬ್ಬರೂ ಅರವಳಿಕೆ ತಜ್ಞರು ಇಲ್ಲ. ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ. ಜಾಫರ್ ರಮೀಜ್ ಸಿದ್ದಕಿ ಅವರು ಕೂಡ ಸ್ವಯಂ ನಿವೃತ್ತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಇದು ಸರ್ಕಾರದ ಮಟ್ಟದಲ್ಲಿ ಇತ್ಯರ್ಥಗೊಳ್ಳಬೇಕಿದೆ. ಇದರಿಂದ ಆಸ್ಪತ್ರೆಯಲ್ಲಿ ಹೆರಿಗೆ



ಪ್ರಮಾಣ ಕಡಿಮೆಯಾಗುತ್ತಿದೆ. ಯಾವ್ಯಾವ ವೈದ್ಯರು ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿದ್ದಾರೆಯೋ ಅವರನ್ನು ಕೂಡಲೇ ಸರ್ಕಾರದ ಹಂತದಲ್ಲಿ ಇತ್ಯರ್ಥ ಮಾಡಿ ಖಾಲಿ ಹುದ್ದೆ ಎಂದು ತೋರಿಸಿ ಹೊಸದಾಗಿ ನೇಮಕ ಮಾಡಿಕೊಡಬೇಕೆಂದು ಅವರು ಮನವಿ ಮಾಡಿದರು.

ಆಸ್ಪತ್ರೆಯಲ್ಲಿ ಎರಡು ಸ್ಕ್ಯಾನಿಂಗ್ ಯಂತ್ರಗಳುಇದ್ದು,ರೇಡಿಯಾಲಜಿಸ್ಟ್ ಇರುವುದಿಲ್ಲ.ಪ್ರತಿ ಗುರುವಾರದಂದು ಹೊಳೆನರಸೀಪುರ ಆಸ್ಪತ್ರೆಯಿಂದ ರೇಡಿಯಾಲಜಿಸ್ಟ್ ಬಂದು ತಪಾಸಣೆ ನಡೆಸುತ್ತಾರೆ. ಇವರಿಗೆ ಕರ್ತವ್ಯ ಒತ್ತಡ ಇದ್ದರೇ ಅವರು ನಿಗದಿಯಂತೆ ಗುರುವಾರ ಬರದೆ ಗೈರಾಗುತ್ತಾರೆ. ಆಸ್ಪತ್ರೆಗೆ ಒಟ್ಟು 35 ಗ್ರೂಪ್ ಡಿ ಹುದ್ದೆಗಳಿದ್ದು,ಕೇವಲ ಒಬ್ಬರು ಕಾರ್ಯನಿರ್ವಹಿಸುತ್ತಿದ್ದಾರೆ.34 ಖಾಲಿ ಉಳಿದಿವೆ.ಇದರಿಂದ ನಿತ್ಯದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ.ಬಾಕಿ ಹುದ್ದೆಗಳನ್ನು ಹೊರಗುತ್ತಿಗೆ ಆದಾರದಲ್ಲಿ ತುಂಬಿಕೊಳ್ಳಲು ಅವಕಾಶ ಮಾಡಿಕೊಡಬೇಕಿದೆ ಎಂದರು.

ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ 3 ಹುದ್ದೆಗಳು ಖಾಲಿ ಇವೆ. ಶುಶ್ರೂಷಾಧಿಕಾರಿಗಳು ಹುದ್ದೆ ಒಟ್ಟು 20 ಇದ್ದು, 16 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. 4 ಹುದ್ದೆ ಖಾಲಿ ಇವೆ. ಹಿರಿಯ ಔಷಧಿ ವಿತರಕರು, ಕಿರಿಯ ಔಷಧಿ ವಿತಕರ ಹುದ್ದೆ, ಕಿರಿಯ ಪ್ರಯೋಗಶಾಲಾ ಟೆಕ್ನಾಲಾಜಿಸ್ಟ್, ಪುರುಷ ಆರೋಗ್ಯ ಸಹಾಯಕರು 2 ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕರು 4 ಹುದ್ದೆಗಳು ಖಾಲಿ ಉಳಿದಿವೆ. ಇದು ನಮಗೆ ಆರೋಗ್ಯ ಸೇವೆಗೆ ಸಮಸ್ಯೆಯಾಗುತ್ತಿದೆ. ತಜ್ಞ ವೈದ್ಯರು ಸೇರಿದಂತೆ ಇತರೆ ಹುದ್ದೆಗಳು ಸೇರಿ ಒಟ್ಟು 95 ಹುದ್ದೆಗಳಿಗೆ ಕೇವಲ 39 ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 56 ಹುದ್ದೆಗಳು ಖಾಲಿ ಇವೆ. ಇರುವ ವೈದ್ಯರು, ಸಿಬ್ಬಂದಿಗಳ ಉತ್ತಮವಾಗಿ ಸೇವೆ ನೀಡುತ್ತಿದ್ದಾರೆ. ಬಾಕಿ ಹುದ್ದೆಗಳನ್ನು ತುಂಬಿದರೇ ಆರೋಗ್ಯ ಸೇವೆ ಒದಗಿಸಲು ಅನುಕೂಲವಾಗಲಿದೆ. ಆರೋಗ್ಯ ಇಲಾಖೆ ಹಿರಿಯ ಅಧಿಕಾರಿಗಳು ಗಮನಹರಿಸಿ ವೈದ್ಯರು, ತಜ್ಞರು, ಸಿಬ್ಬಂದಿಗಳು ತ್ವರಿತವಾಗಿ ಒದಗಿಸಬೇಕೆಂದು ಅವರು ಒತ್ತಾಯಿಸಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019